252 ಪ । ಹಂಪಾಪುರದಹತ್ತೀದಿಡ್ಡೀಹೊಲಕ್ಕೆ ಬ । ಪಡುವಮುಖವಾಗಿನೆಟ್ಟಕ ೧ ಇದಕ್ಕೆ ಮೂ । ಕಾವೇರಿಗೆಪ । ಹಂಪಾಪುರಕ್ಕೆ ಈಶಾನ್ಯ । ಯಲವದತಾ

253 ಲಕೊರಕಲಿಗೆತೆಂ । ಹತ್ತೀದಿಡ್ಡೀಹೊಲಕ್ಕೆ ಬ । ನೈರುತ್ಯಾಭಿಮುಖವಾಗಿನೆಟ್ಟಕ ೧ ಇದಕ್ಕೆ ತೆಂ । ಕಾವೇರಿಗೆಪ । ಹಂಪಾಪು ರಕ್ಕೆ ಈಶಾನ್ಯಗೂ

254 ಡಿದಮೂ । ಹತ್ತಿದಿಡೆಹೊಲಕ್ಕೆ ಬ । ನೈರುತ್ಯಮುಖವಾಗಿನೆಟ್ಟಕ ೧ ಇದಕ್ಕೆ ತೆಂ । ಹಂಪಾಪುರಕೆಆಗ್ನೇಯಸಿದ್ದಲಿಂಗೆಗೌ ಡನತೋಪಿಗೆಮೂ ।

255 ಕಾವೇರಿಗೆಪ । ವಾಯುವ್ಯಮುಖವಾಗಿನೆಟ್ಟಕ ೧ ಇದಕ್ಕೆತೆಂ । ಹಂಪಾಪುರಕ್ಕೆನೈರುತ್ಯಸನ್ಯಾಸಿಪುರದಯಲ್ಲಿಗೆಮೂ । ಈಶಾನ್ಯಮುಖವಾ

256 ಗಿನೆಟ್ಟಕಲ್ಲು ೧ ಇದಕ್ಕೆಪ । ಹಂಪಾಪುರಕ್ಕೆತೆಂ । ಸನ್ಯಾಸಿಪುರದಹೊಲದತೆವರಿಗೆಬ । ಕಾವೇರಿಗೆಮೂ । ಬಡಗಮುಖವಾಗಿನೆಟ್ಟ

257 ಕ ೧ ಇದಕ್ಕೆಪ । ಹಂಪಾಪುರಕೆತೆಂ । ಸನ್ಯಾಸಿಪುರದಹೊಲಕ್ಕೆಮೂ । ಹಳೇಕಾಲುವೆಹೊಲದಯೇರೀಮೇಲೆಪೇಲೀವತ್ತಿನಲ್ಲುಬಡಗಮುಖ

೩ನೇ ಪತ್ರದ ಹಿಂಭಾಗ.

258 ವಾಗಿನೆಟ್ಟಕ ೧ ಇದಕ್ಕೆಬ । ಹಂಪಾಪುರಕ್ಕೆತೆಂ । ಹಳೇಕಾಲುವೆಗೆಪ । ಸನ್ಯಾಸಿಪುರಕ್ಕೆಮೂ । ಬಡಗಮುಖವಾಗಿನೆಟ್ಟಕ ೧

259 ಇದಕ್ಕೆಪ । ಹಂಪಾಪುರಕೆತೆಂ । ಕಾವೇರಿಗೆಮೂ । ಸನ್ಯಾಸಿಪುರದಯಲ್ಲಿಗೆಬ । ಬಡಗಮುಖವಾಗಿನೆಟ್ಟಕ ೧ ಇದಕ್ಕೆಬ । ಹಂಪಾಪುರಕ್ಕೆ

260 ಬ । ಕಾವೇರಿಗೆಮೂ । ಹಳೆಕಾಲುವೆಗೆತೆಂ । ಮೂಡಮುಖವಾಗಿನೆಟ್ಟಕ ೧ ಇದಕ್ಕೆಬ । ಹಂಪಾಪುರದಕಾಲುವೆಗೆಮೂ । ಬೈರಾಪುರದಕಲ್ಲಿಗೆ

261 ತೆಂ । ಹಂಪಾಪುರಕ್ಕೆವಾಯುವ್ಯಕಾಲುವೆವತ್ತಿನಲ್ಲುಆಗ್ನೇಯಮುಖವಾಗಿನೆಟ್ಟಕ ೧ ಇದಕ್ಕೆಮೂ । ಬೈರಾಪುರದಕಲ್ಲಿಗೆತೆಂ। ಹಂಪಾಪು

262 ರದಯಲ್ಲಿಗೆಬ । ಆಗ್ನೇಯಮುಖವಾಗಿನೆಟ್ಟಕ ೧ ಇದಕ್ಕೆಬ । ಬಸವನಹಳ್ಳೀಕಲ್ಲಿಗೆತೆಂ । ಬೈರಾಪುರಕ್ಕೆಮೂ । ಕಟ್ಟೋಟ್ಬೈಗಿಡು

263 ವಿಗೆಪಡು । ಆಗ್ನೇಯಮುಖವಾಗಿನೆಟ್ಟಕಲ್ಲು ೧ ಇದಕ್ಕೆಮೂ । ಬಸವನಹಳ್ಳೀಕಲ್ಲಿಗೆತೆಂ । ಈಯಲ್ಲಿಗೆಪ । ಹಂಪಾಪುರಕ್ಕೆವಾಯ

264 ವ್ಯ । ತೆಂಕಮುಖವಾಗಿನೆಟ್ಟಕ ೧ ಇದಕ್ಕೆತೆಂ । ಹಂಪಾಪುರಕ್ಕೆವಾಯುವ್ಯ । ಹಂಪಾಪುರದಮಳಲಹೊಲಕ್ಕೆಮೂ । ಚೆಂನಿಸೆಟ್ಟೀಕೊ

265 ಪ್ಪಲಿಗೆಪ । ತೆಂಕಮುಖವಾಗಿನೆಟ್ಟಕ ೧ ಇದಕೆಮೂ । ಮಂಚನಹಳ್ಳಿಯಲ್ಲಿಗೆಬ । ಬಸವನಹಳ್ಳೀಕಲ್ಲಿಗೆತೆಂ । ಚೇನ

266 ಸಟ್ಟಿಕೊಪ್ಪಲಿಗೆಮೂ । ತೆಂಕಮುಖವಾಗಿನೆಟ್ಟಕ ೧ । ಇದಕ್ಕೆಮೂ । ಮಂಚೇನಹಳ್ಳಿಯಲ್ಲಿಗೆಪ । ಹಂಪಾಪುರದಹೊಲ

267 ಕ್ಕೆಬ । ಪಡುವಮುಖವಾಗಿನೆಟ್ಟಕ ೧ ಇದಕ್ಕೆತೆಂ । ಮಾರೀಹೊಲಕ್ಕೆಬ । ಚೆಂನಸೆಟ್ಟಿಹೊಲಕ್ಕೆಮೂ । ಮಂಚೇನಹ

268 ಳ್ಳಿಕಲ್ಲಿಗೆತೆಂ । ಹೊಲದತಲೆಕಟ್ಟಿನಲ್ಲುಪಡುವಮುಖವಾಗಿನೆಟ್ಟಕ ೧ ಇದಕ್ಕೆಮೂ । ಹಂಪಾಪುರಕ್ಕೆಬ । ಮಂಚನಹಳ್ಳಿಕ

269 ಲ್ಲಿಗೆತೆಂ । ಮಂಚನಹಳ್ಳಿಹಂಪಾಪುರದಮಧ್ಧಿಕದಕೆರೆಗೆಪ । ತೆಂಕಮುಖವಾಗಿನೆಟ್ಟಕಲ್ಲು ೧ ಅಂತುಕಲ್ಲು ೧೨ ಬೈ

270 ರಾಪುರದಗ್ರಾಮಕ್ಕೆಕಲ್ಲನಟ್ಟವಿವರ । ಬೈರಾಪುರಕ್ಕೆಮೂ । ಹಂಪಾಪುರದಕಲ್ಲಿಗೆತೆಂ । ಹಂಪಾಪುರದಯಲ್ಲಿಗೆಪ । ಬೈರೆದೇವರ

271 ಗುಡಿಗೆಬ । ಪಡುವಮುಖವಾಗಿನೆಟ್ಟಕಲ್ಲು ೧ ಇದಕ್ಕೆತೆಂ । ಹಂಪಾಪುರದಕಲ್ಲಿಗೆಬ । ಬೈರಾಪುರಕ್ಕೆಮೂ । ಹಂಪಾಪುರದಯಲ್ಲಿಗೆಪ । ವಾಯು

272 ವ್ಯಮುಖವಾಗಿನೆಟ್ಟಕ ೧ ಇದಕ್ಕೆಪ । ಹಂಪಾಪುರದಕಲ್ಲಿಗೆಬ । ಹಂಪಾಪುರದಕಾಲುವೆಗೆಮೂ । ಬೈರಾಪುರಕ್ಕೆನೈರುತ್ಯ । ಈಶಾನ್ಯಮುಖವಾ

273 ಗಿನೆಟ್ಟಕ ೧ ಇದಕ್ಕೆಪ । ಬೈರಾಪುರಕ್ಕೆತೆಂ । ಹಂಪಾಪುರದತೋಟಕ್ಕೆಬ । ಈಚಲಗುಂಡೀಬಳಿಯಲ್ಲುಬಡಗಮುಖವಾಗಿನೆಟ್ಟಕ ೧ ಇದಕ್ಕೆನೈ

274 ರುತ್ಯಹಂಪಾಪುರದಕಾಲುವೆಗೆಬ । ಬಾಲೂರಯಲ್ಲಿಗೆಮೂ । ಹಂಪಾಪುರದತೋಟಕ್ಕೆಪ । ಈಶಾನ್ಯಮುಖವಾಗಿನೆಟ್ಟಕ ೧ ಇದಕೆಬ । ಬೈರಾಪುರಕ್ಕೆ

275 ನೈರುತ್ಯ । ಬಾಲೂರಯಲ್ಲಿ ಗೆಮೂ । ಹಂಪಾಪುರದತೋಟಕ್ಕೆ ಪ । ಬಡಗಲುಮುಖವಾಗಿನೆಟ್ಟ ಕ ೧ ಇದಕ್ಕೆ ಪ । ಬಾಳೂರಕ
ಲ್ಲಿಗೆಮೂ । ಈಯಲ್ಲಿ ಗೆಬ ।

276 ಹಂಪಾಪುರಕ್ಕೆ ನೈರುತ್ಯ । ಈಶಾನ್ಯಮುಖವಾಗಿನೆಟ್ಟಕ ೧ ಇದಕ್ಕೆ ಪ । ಪೈರಾಪುರಕ್ಕೆ ಪ । ಬಾಳೂರಯಲ್ಲಿ ಗೆಮೂ । ಕರೀಸಿ
ದ್ಧನಕೋರೇಗಿಡುವಿಗೆ

277 ತೆಂ । ದಾರೀಬಡಗವತ್ತಿನಲ್ಲಿಮೂಡಮುಖವಾಗಿನೆಟ್ಟಕ ೧ ಇದಕ್ಕೆ ಬ । ಬಾಳೂರಕಲ್ಲಿಗೆಪ । ಪೈರಾಪುರಕ್ಕೆ ವಾಯುವ್ಯ । ಬಾ
ಳೂರಯಲ್ಲಿ ಗೆಬ । ಆ

278 ಗ್ನೇಯ-ಮುಖವಾಗಿನೆಟ್ಟಕ ೧ ಇದಕ್ಕೆ ಬ । ಪೈರಾಪುರಕ್ಕೆ ವಾಯುವ್ಯ । ಬಾಲೂರಕಲ್ಲಿಗೆಮೂಡಲು । ಅರ್ಜನಹಳ್ಳಿಗೆತೆಂ ।
ಆಗ್ನೇಯಮುಖವಾಗಿ

279 ನೆಟ್ಟಕ ೧ ಇದಕ್ಕೆ ಮೂ । ಪೈರಾಪುರಕ್ಕೆ ಬ । ಅರ್ಜನಹಳ್ಳಿಯಲ್ಲಿ ಗೆತೆಂ । ಹಂಪೆಗೌಡನಕಟ್ಟೆಗೆಪ । ತೆಂಕಮುಖವಾಗಿ
ನೆಟ್ಟಕ ೧ ಇದಕ್ಕೆ ಮೂ ।

280 ಬಸವನಹಳ್ಳಿಕಲ್ಲಿಗೆಪ । ಅರ್ಜನಹಳ್ಳೀಯಲ್ಲಿ ಗೆತೆಂ । ಪೈರಾಪುರಕ್ಕೆ ಈಶಾನ್ಯನೈರುತ್ಯಮುಖವಾಗಿನೆಟ್ಟಕ ೧ ಇದಕ್ಕೆ ತೆಂ ।
ಬಸವನಹಳ್ಳಿ

281 ಕಲ್ಲಿಗೆಮೂ । ಪೈರಾಪುರಕ್ಕೆ ಬ । ಬಸವನಹಳ್ಳಿಯಲ್ಲಿ ಗೆಪ । ಪಡುವಮುಖವಾಗಿನೆಟ್ಟಕಲ್ಲು ೧ ಅಂತುಕಲ್ಲು ೧೨ ಬಸವನಹ
ಳ್ಳಿಗ್ರಾಮವಂದ

282 ಕ್ಕೆ ಕಲ್ಲನೆಟ್ಟವಿವರ । ಬಸವನಹಳ್ಳಿಗೆಆಗ್ನೇಯ । ಹಂಪಾಪುರದಕಲ್ಲಿಗೆಬ । ಮಂಚನಹಳ್ಳಿಯಲ್ಲಿ ಗೆಪ । ವಾಯುವ್ಯಮುಖವಾ
ಗಿನೆಟ್ಟಕ ೧

283 ಇದಕ್ಕೆ ಪ । ಹಂಪಾಪುರದಕಲ್ಲಿಗೆಬ । ಹಂಪಾಪುರದಮಳಲಹೊಲಕ್ಕೆ ಮೂ । ಬಸವನಹಳ್ಳಿಗೆತೆಂ । ಬಡಗಗೂಡಿದಈಶಾನ್ಯ
ಮುಖವಾಗಿನೆಟ್ಟ

284 ಕಲ್ಲು ೧ । ಇದಕ್ಕೆ ಬಸವನಹಳ್ಳಿಯಲ್ಲಿ ಗೆತೆಂ । ಚೆಂನಶೆಟ್ಟಿಕೊಪ್ಪಲಿಗೆಪ । ಹಂಪಾಪುರದಬಡಗಣವತ್ತಿನಲ್ಲುಬಡಗಮುಖವಾ
ಗಿನೆಟ್ಟಕ

285 ಲ್ಲು ೧ ಇದಕ್ಕೆ ಪ । ಹಂಪಾಪುರದಕಲ್ಲಿಗೆಬ । ಬಸವನಹಳ್ಳಿಗೆತೆಂ । ಪೈರಾಪುರಕ್ಕೆ ಮೂ । ಬಡಗಮುಖವಾಗಿನೆಟ್ಟಕ ೧ ಇದ
ಕ್ಕೆ ಬ । ಪೈರಾಪು

286 ರದಕಲ್ಲಿಗೆಮೂ । ಬಸವನಹಳ್ಳಿಯಲ್ಲಿ ಗೆಪಡುವಣತಲೇಕಟ್ಟನಲ್ಲುಮೂಡಮುಖವಾಗಿನೆಟ್ಟಕ ೧ ಇದಕ್ಕೆ ಬ । ಪೈರಾಪುರದ
ಕಲ್ಲಿಗೆ

287 ಮೂ । ಅರ್ಜನಹಳ್ಳೀಯಲ್ಲಿ ಗೆತೆಂ । ಬಸವನಹಳ್ಳಿಯಲ್ಲಿ ಗೆಪಡುವಣತಲೆಕಟ್ಟನಲ್ಲುಮೂಡಮುಖವಾಗಿನೆಟ್ಟಕಲ್ಲು ೧ ಇದ
ಕ್ಕೆ ಮೂ । ಗಳಿ

288 ಗೆಕೆರೆಅರ್ಜನಹಳ್ಳಿಬಸವನಹಳ್ಳಿಯಲ್ಲಿ ಗೆಮದ್ದಿಕದಕಲ್ಲಿಗೆಆಗ್ನೇಯಕೆಂಬರೆಹಳ್ಳಕೆಪ । ತೆಂಕಮುಖವಾಗಿನೆಟ್ಟಕ ೧

289 ಇದಕ್ಕೆ ಮೂ । ಗಳಿಗೆಕೆರೆಯಲ್ಲಿ ಗೆತೆಂಕಲು । ಮಂಚನಹಳ್ಳಿಕಲ್ಲಿಗೆಪ । ಬಸವನಹಳ್ಳಿಯಲ್ಲಿ ಗೆಈಶಾನ್ಯನೈರುತ್ಯಾಭಿಮುಖವಾ
ಗಿನೆಟ್ಟ

290 ಕಲ್ಲು ೧ ಇದಕ್ಕೆ ತೆಂ । ಮಂಚನಹಳ್ಳಿಕಲ್ಲಿಗೆಪ । ಹಂಪಾಪುರದಚೆಂನಶೆಟ್ಟಿಹೊಲಕೆಬಡಗಲು । ಬಸವನಹಳ್ಳಿಗೆಮೂ । ಮಂ
ಚನಹಳ್ಳೀ

291 ಕಲ್ಲಿನಪಡುವಣವತ್ತಿನಲ್ಲುಪಡುವಮುಖವಾಗಿನೆಟ್ಟಕಲ್ಲು ೧ ಅಂತುಗ್ರಾಮವಂದಕ್ಕೆ ಕ ೯ ಮಂಚನಹಳ್ಳಿಗ್ರಾಮವಂದಕ್ಕೆ ಕಲ್ಲನೆ

292 ಟ್ಟವಿವರ । ಮಂಚನಹಳ್ಳಿಗೆತೆಂ । ಹಂಪಾಪುರದಕಲ್ಲಿಗೆಬ । ಹಂಪಾಪುರದಕೆರೆಗೆಪ । ಬಡಗಮುಖವಾಗಿನೆಟ್ಟಕಲ್ಲು ೧ ಇದಕ್ಕೆ

293 ತೆಂ । ಮಂಚನಹಳ್ಳೀಗೆಪ । ಹಂಪಾಪುರದಕಲ್ಲಿಗೆಬ । ಚೆಂನಿಶೆಟ್ಟಿಹೊಲಕ್ಕೆ ಮೂ । ಈಶಾನ್ಯಮುಖವಾಗಿನೆಟ್ಟಕ ೧ ಈಕಲ್ಲಿಗೆ
ವಾಯುವ್ಯ ।

294 ಮಂಚನಹಳ್ಳಿಹೊಲಕ್ಕೆ ಪ । ಬಸವನಹಳ್ಳಿಹೊಲಕ್ಕೆ ತೆಂ । ಮೂಡಮುಖವಾಗಿನೆಟ್ಟಕ ೧ ಇದಕ್ಕೆ ಬ । ಮಂಚನಹಳ್ಳೀಕಲ್ಲಿಗೆ
ಪಡುವಲು

295 ಕೊತ್ತೀಕಟ್ಟೆ ಕೋರೆಗೆತೆಂ । ಮೂಡಮುಖವಾಗಿನೆಟ್ಟಕ ೧ ಇದಕ್ಕೆ ಬ । ಬಸವನಹಳ್ಳಿಗೆಈಶಾನ್ಯಕಲ್ಲಿಗೆಮೂಡಲುಗಲಗೆಕೆ
ರೆಯಲ್ಲಿ

296 ಗೆತೆಂ । ಮಂಚನಹಳ್ಳಿಗೆವಾಯುವ್ಯ । ಆಗ್ನೇಯಮುಖವಾಗಿನೆಟ್ಟಕಲ್ಲು ೧ ಇದಕ್ಕೆಮೂ । ಗಳಗೆಕೆರೆಯಲ್ಲಿಗೆತೆಂ । ಮಂಚನಹಳ್ಳಿಗೆಬ । ಕೆಂಬ

297 ರಹಳ್ಳಕ್ಕೆಪ । ತೆಂಕಮುಖವಾಗಿನೆಟ್ಟಕಲ್ಲು ೧ ಇದಕ್ಕೆಮೂ । ಗಳಗೆಕೆರೆಹೊಲಕ್ಕೆತೆಂ । ಕಾವೇರಿಗೆಪ । ಮಂಚನಹಳ್ಳಿಗೆ ಈಶಾನ್ಯ ।

298 ನೈರುತ್ಯಮುಖವಾಗಿನೆಟ್ಟಕಲ್ಲು ೧ ಇದಕ್ಕೆತೆಂ । ಕಾವೇರಿಗೆಪ । ಮಂಚನಹಳ್ಳಿಗೆಆಗ್ನೇಯ । ಹಂಪಾಪುರಈಶಾನ್ಯದಕಲ್ಲಿಗೆ

299 ಬ । ವಾಯುವ್ಯಮುಖವಾಗಿನೆಟ್ಟಕ ೧ ಇದಕೆಪ । ಹಂಪಾಪುರದಗದ್ದೆಗೆಪ । ಮಂಚನಹಳ್ಳಿಗೆಆಗ್ನೇಯಹತ್ತಿಬಿಡ್ಡೆಹೊಲ

೫ನೇ ಪತ್ರದ ಮುಂಭಾಗ.

300 ಕ್ಕೆತೆಂ । ಬಡಗಮುಖವಾಗಿನೆಟ್ಟಕಲ್ಲು ೧ ಇದಕ್ಕೆಬ । ಹಂಪಾಪುರದಕಲ್ಲಿಗೆಮೂ । ಕಾವೇರಿಗೆಪ । ಮಂಚನಹಳ್ಳಿಗೆಆ

301 ಗ್ನೇಯಮೂಡಮುಖವಾಗಿನೆಟ್ಟಕಲ್ಲು ೧ ಇದಕ್ಕೆಪ । ಹಂಪಾಪುರದಕಲ್ಲಿಗೆಬ । ಮಂಚನಹಳ್ಳಿಗೆತೆಂ । ಬಡಗಮುಖವಾಗಿನೆಟ್ಟಕಲ್ಲು ೧ ಇದ

302 ಕ್ಕೆತೆಂ । ಹಂಪಾಪುರದಕಲ್ಲಿಗೆಬ । ಮಂಚನಹಳ್ಳಿಗೆತೆಂ । ಬಡಗಮುಖವಾಗಿನೆಟ್ಟಕಲ್ಲು ೧ ಅಂತುಗ್ರಾಮಪಂದಕ್ಕೆಕಲ್ಲು ೧೨ ಬಾಲೂರಗ್ರಾ

303 ಮಕ್ಕೆಕಲ್ಲನೆಟ್ಟವಿವರಬಾಲೂರಿಗೆಆಗ್ನೇಯ । ಹಂಪಾಪುರದಕಾಲುವೆಗೆಬ । ಬೈರಾಪುರದಕಲ್ಲಿಗೆಪ । ಕುರುಗಡೀಗಿದುವೆಗೆತೆಂ । ವಾಯುವ್ಯ

304 ಮುಖವಾಗಿನೆಟ್ಟಕಲ್ಲು ೧ ಇದಕ್ಕೆಬ । ಬಾಲೂರಿಗೆಮೂ । ಬೈರಾಪುರದಕಲ್ಲಿಗೆಪ । ಕುರುಗಡೀಗಿಡುವಿಗೆತೆಂ । ಪಡುಮುಖವಾಗಿನೆಟ್ಟಕ ೧ ಇದಕ್ಕೆಪ । ಬಾ

305 ಲೂರಿಗೆಮೂ । ಬೈರಾಪುರಕ್ಕೆತೆಂ । ಬಾಲೂರಹೊಲಕ್ಕೆಬ । ಪಡುವಮುಖವಾಗಿನೆಟ್ಟಕ ೧ ಇದಕ್ಕೆಬ । ಬಾಲೂರಿಗೆಮೂ । ಬೈರಾಪುರದಕಲ್ಲಿಗೆ । ಪ । ಈಬೋ

306 ರೇಮೇಲೆಪಡುವಮುಖವಾಗಿನೆಟ್ಟಕ ೧ ಇದಕ್ಕೆಬ । ಬೈರಾಪುರಕ್ಕೆಈಶಾನ್ಯಗೂಡಿದಮೂ । ಬೈರಾಪುರದಕಲ್ಲಿಗೆಪ । ಬಾಲೂರಯಲ್ಲಿಗೆತೆಂಕಲವ

307 ತ್ತಿನಲ್ಲುಪಡುವಮುಖವಾಗಿನೆಟ್ಟಕ ೧ ಇದಕ್ಕೆಬ । ಬಾಲೂರಿಗೆಈಶಾನ್ಯಬೈರಾಪುರದಕಲ್ಲಿಗೆಪ । ಅರ್ಜುನಹಳ್ಳೀಯಲ್ಲಿಗೆತೆಂ । ಈಬಾಲೂರಯಲ್ಲಿ

308 ಗೆಪ । ನೈರುತ್ಯಮುಖವಾಗಿನೆಟ್ಟಕ ೧ ಇದಕ್ಕೆಬ । ಬಾಲೂರಿಗೆವಾಯುವ್ಯಅರ್ಜುನಹಳ್ಳೀಕಲ್ಲಿಗೆತೆಂ । ಯಡಹಳ್ಳೀಕಲ್ಲಿಗೆಮೂ । ಬಾಲೂರಯಲ್ಲಿಗೆಪ

309 ಡುವಣವತ್ತಿನಲ್ಲುಆಗ್ನೇಯಮುಖವಾಗಿನೆಟ್ಟಕ ೧ ಇದಕ್ಕೆಬ । ಯಡಹಳ್ಳೀಕಲ್ಲಿಗೆಮೂ । ಬಾಲೂರಕಲ್ಲಿಗೆವಾಯುವ್ಯಮೂಡಮುಖವಾಗಿನೆಟ್ಟಕ ೧

310 ಇದಕ್ಕೆಬ । ಯಡಹಳ್ಳೀಕಲ್ಲಿಗೆತೆಂ । ಬಾಲೂರಿಗೆವಾಯುವ್ಯ । ಯಡಹಳ್ಳೀತೋಟಕ್ಕೆಮೂ । ಮೂಡಮುಖವಾಗಿನೆಟ್ಟಕ ೧ ಇದಕ್ಕೆಬ । ಹಂಪಾಪುರದತೋ

311 ಟಕ್ಕೆತೆಂ । ಹಂಪಾಪುರದಕಾಲ್ವೆಗೆಮೂ । ಬಾಲೂರಿಗೆಪ । ಮೂಡಮುಖವಾಗಿನೆಟ್ಟಕಲ್ಲು ೧ ಇದಕ್ಕೆಪ । ಬಾಲೂರಿಗೆತೆಂ । ಹಂಪಾಪುರದಕಾಲ್ವೆಗೆಬ ।

312 ಕಾಲ್ವೆವತ್ತಿನಲ್ಲುನೆಟ್ಟಕ ೧ ಇದಕ್ಕೆಪ । ಬಾಲೂರಿಗೆತೆಂ । ಹಂಪಾಪುರದಕಾಲ್ವೆಗೆಬ । ಕಾಲ್ವೆವತ್ತಿನಲ್ಲಿಬಡಗಮುಖವಾಗಿನೆಟ್ಟಕ ೧ ಇದಕ್ಕೆಪ ।

313 ಹಂಪಾಪುರದಕಾಲ್ವೆಗೆಬ । ಬಾಲೂರಿಗೆತೆಂ । ಬಂಡಿಗಾದಮೇಲೆಮೂ । ಬಡಗಮುಖವಾಗಿನೆಟ್ಟಕಲ್ಲು ೧ ಅಂತುಕಲ್ಲು ೧೩ ಈ ಗ್ರಾಮದವಕ್ಕ

314 ಲುಇಲ್ಲ । ಸಂನ್ಯಾಸಪುರವೆಂಬಗ್ರಾಮಕ್ಕೆಕಲ್ಲನೆಟ್ಟವಿವರ । ಹಂಪಾಪುರದಕಲ್ಲಿಗೆಬ । ಹಂಪಾಪುರದಹೊಲಕ್ಕೆಪ । ಸಂನ್ಯಾಸಿಪುರಕ್ಕೆಈಶಾ

315 ನ್ಯಹೊಲವತೆವರಿನಮೇಲೆನೈರುತ್ಯಮುಖವಾಗಿನೆಟ್ಟಕ ೧ ಇದಕ್ಕೆತೆಂ । ಸನ್ಯಾಸಿಪುರಕ್ಕೆಆಗ್ನೇಯಕಾವೇರಿಗೆಪ । ವಾಯುವ್ಯಮುಖವಾಗಿನೆ

316ಟ್ಟಿಕ ೧ ಇದಕ್ಕೆ ಪ । ಕಾವೇರಿಗೆಬ । ಸನ್ಯಾಸಿಪುರಕ್ಕೆ ತೆಂ । ಬಡಗಮುಖವಾಗಿನೆಟ್ಟಿಕ ೧ ಇದಕ್ಕೆ ಪ । ಸನ್ಯಾಸಿಪುರಕ್ಕೆ ನೈ
ರುತ್ಯ । ಕಾವೇರಿಗೆಮೂ ।

317ಈಶಾನ್ಯಮುಖವಾಗಿನೆಟ್ಟಿಕ ೧ ಇದಕ್ಕೆ ಮೂ । ಹಂಪಾಪುರದಹಳೇಕಾಲ್ವೆಗೆಪ । ಸನ್ಯಾಸಿಪುರಕೆಬ । ಹಂಪಾಪುರದಕಾಲ್ವೆ
ಗೆತೆಂ । ತೆಂಕಮುಖವಾಗಿ

318ನೆಟ್ಟಿಕ ೧ ಇದಕ್ಕೆ ತೆಂ । ಸನ್ಯಾಸಿಪುರಕೆಬ । ಹಳೇಕಾಲ್ವೆಗೆಪ । ಸನ್ಯಾಸಿಪುರದಹೊಲಕ್ಕೆ ಮೂ । ಹಂಪಾಪುರದಹಳೆಕಾಲ್ವೇ
ವತ್ತಿನಲ್ಲಿತೆಂಕ

319ಮುಖವಾಗಿನೆಟ್ಟಿಕಲ್ಲು ೧ ಇದಕ್ಕೆ ಮೂ । ಸನ್ಯಾಸಿಪುರಕ್ಕೆ ಬ । ಹಂಪಾಪುರದಕಲ್ಲಿಗೆತೆಂ । ತೆಂಕಮುಖವಾಗಿನೆಟ್ಟಿಕಲ್ಲು
೧ ಅಂತುಕಲ್ಲು ೭ ಯ

320ಡಹಳ್ಳಿಗೆಕಲ್ಲನೆಟ್ಟವಿವರ । ಯಡಹಳ್ಳಿಗೆಆಗ್ನೇಯ । ಬಾಲೂರಕಲ್ಲಿಗೆಬ । ಯಡಹಳ್ಳೀತೋಟಕ್ಕೆ ಮೂ । ಯಡಹಳ್ಳೀಯಲ್ಲಿಗೆ
ತೆಂ । ವತ್ತಿನಲ್ಲುವಾಯುವ್ಯ

321ಮುಖವಾಗಿನೆಟ್ಟಿಕಲ್ಲು ೧ ಇದಕ್ಕೆ ಬ । ಬಾಲೂರಕಲ್ಲಿಗೆಪ । ಯಡಹಳ್ಳಿಗೆಮೂ । ಪಡುವಮುಖವಾಗಿನೆಟ್ಟಿಕ ೧ ಇದಕ್ಕೆ ಬ ।
ಬಾಲೂರಕಲ್ಲಿಗೆಪ । ಯಡಹಳ್ಳಿ

322ಗೆಈಶಾನ್ಯ । ಅರ್ಜುನಹಳ್ಳಿಗೆತೆಂ । ಪಡುವಮುಖವಾಗಿನೆಟ್ಟಿಕಲ್ಲು ೧ ಇದಕ್ಕೆ ಪ । ಯಡಹಳ್ಳಿಗೆಮೂ । ಗಂಧನಹಳ್ಳಿಕಟ್ಟೆಗೆ
ತೆಂ । ಯಡಹಳ್ಳಿಗೆಬ । ವತ್ತಿನ

323ಲ್ಲುತೆಂಕಮುಖವಾಗಿನೆಟ್ಟಿಕ ೧ ಇದಕ್ಕೆ ಪ । ಯಡಹಳ್ಳಿಗೆಬ । ಗಂಧನಹಳ್ಳಿಯಲ್ಲಿಗೆತೆಂ । ಗಂಧನಹಳ್ಳೀಹೊಲಕ್ಕೆ ಮೂ ।
ತೆಂಕಮುಖವಾಗಿನೆಟ್ಟಿಕ

324ಲ್ಲು ೧ ಇದಕ್ಕೆ ತೆಂ । ಗಂಧನಹಳ್ಳಿಯಲ್ಲಿಗೆಮೂ । ಬೀರನಹಳ್ಳಿಯಲ್ಲಿಗೆಬ । ಮೂಡಮುಖವಾಗಿನೆಟ್ಟಿಕ ೧ ಇದಕ್ಕೆ ಮೂ ।
ಯಡಹಳ್ಳಿಗೆತೆಂ । ಈಹೊಲಕ್ಕೆ ಪ ।

325ಬೀರನಹಳ್ಳಿಗೆಈಶಾನ್ಯದಕಲ್ಲಿನಮೂಡಲವತ್ತಿನಲ್ಲಿಮೂಡಮುಖವಾಗಿನೆಟ್ಟಿಕ ೧ ಇದಕ್ಕೆ ತೆಂ । ಚೆಂಗಕ್ಕೆ ಈಶಾನ್ಯದಕಲ್ಲಿಗೆಮೂ ।
ಯಡಹಳ್ಳೀಯಲ್ಲಿ

326ಗೆಪಡುವವತ್ತಿನಲ್ಲುಮೂಡಮುಖವಾಗಿನೆಟ್ಟಿಕ ೧ ಇದಕ್ಕೆ ತೆಂ । ಚೆಂಗದಕಲ್ಲಿಗೆಮೂ । ಹಂಪಾಪುರದಕಾಲ್ವೆಗೆಬ । ಮೂಡ
ಮುಖವಾಗಿನೆಟ್ಟಿಕ ೧ ಇದಕ್ಕೆ

327ಮೂ । ಹಂಪಾಪುರದಕಾಲ್ವೆಗೆಬ । ಯಡಹಳ್ಳಿಗೆತೆಂ । ಬಡಗಮುಖವಾಗಿನೆಟ್ಟ ೧ ಹೊಲಕ್ಕೆ ಕಲ್ಲನೆಟ್ಟವಿವರ । ಯಡಹಳ್ಳೀ
ಹೊಳೇವ್ರೊತ್ತಿನಹೊಲಕ್ಕೆ ಯಿಶಾ

328ಶಾನ್ಯ । ತೆಂಕಮುಖವಾಗಿನೆಟ್ಟಿಕ ೧ ಇದಕ್ಕೆ ತೆಂ । ಹೊಳೇವ್ರೊತ್ತಿನಲ್ಲಿಬಡಗಮುಖವಾಗಿನೆಟ್ಟಿಕ ೧ ಇದಕ್ಕೆ ಪ । ಚೆಂಗದಹೊ
ಲಕ್ಕೆ ಮೂ । ಬಡಗಮುಖವಾ

329ಗಿನೆಟ್ಟಿಕ ೧ ಇದಕ್ಕೆ ಬ । ಹಂಪಾಪುರದಗದ್ದೆಗೆತೆಂ । ತೆಂಕಮುಖವಾಗಿನೆಟ್ಟಿಕ ೧ ಇದಕ್ಕೆ ಮೂ । ಹಂಪಾಪುರದಗದ್ದೆಗೆತೆಂ ।
ತೆಂಕಮುಖವಾಗಿನೆಟ್ಟ

330ಕಲ್ಲು ೧ ಇದಕ್ಕೆ ಬ । ಹಂಪಾಪುರದಗದ್ದೆಗೆತೆಂ । ತೆಂಕಮುಖವಾಗಿನೆಟ್ಟಿಕಲ್ಲು ೧ ಅಂತುಗ್ರಾಮ ೧ ಕ್ಕೆ ಕಲ್ಲು ೧೬ ಚೆಂಗಕ್ಕೆ
ಕಲ್ಲನೆಟ್ಟವಿವರ । ಯಡಹ

331ಳ್ಳಿಯಮಾವುನಮುದ್ರೆಕಲ್ಲಿಗೆಪಡುವಲು । ಯಡಹಳ್ಳಿಯಯಲ್ಲಿಗೆತೆಂ । ಹಂಪಾಪುರದಕಾಲ್ವೆಗೆಬ । ಚೆಂಗಕ್ಕೆ ಈಶಾನ್ಯ । ನೈ
ರುತ್ಯಾಭಿಮುಖವಾಗಿನೆಟ್ಟಿಕ ೧ ಇದ

332ಕ್ಕೆ ತೆಂ । ಯಡಹಳ್ಳಿಕಾಲ್ವೆಗೆಪ । ಹಂಪಾಪುರದಕಾಲ್ವೆಗೆಬ । ಚೆಂಗಕ್ಕೆ ಮೂ । ಪಡುವಮುಖವಾಗಿನೆಟ್ಟಿಕ ೧ ಇದಕ್ಕೆ ತೆಂ ।
ಹಂಪಾಪುರದಕಾಲ್ವೆಗೆಬ । ಕಾ

333ಲ್ವೆತಿಟ್ಟಿನಮಾವಿನಮರಕ್ಕೆ ಪ । ಚೆಂಗಕ್ಕೆ ಆಗ್ನೇಯ । ವಾಯುವ್ಯಮುಖವಾಗಿನೆಟ್ಟಿಕಲ್ಲು ೧ ಇದಕ್ಕೆ ಪ । ಚೆಂಗಕ್ಕೆ ನೈರುತ್ಯ ।
ಹಂಪಾಪುರದಕಾ

334ಲುವೆಗೆಬ । ಮಿರ್ಲೆಯಲ್ಲಿಗೆಮೂ । ಈಶಾನ್ಯಮುಖವಾಗಿನೆಟ್ಟಿಕ ೧ ಇದಕ್ಕೆ ಬ । ಚೆಂಗಕ್ಕೆ ಪ । ಬೀರನಹಳ್ಳಿಯಲ್ಲಿಗೆತೆಂ ।
ಕೋಟೇಚೆಂಗದಯಲ್ಲಿಗೆಮೂ । ಚೆಂ

335 ಗಬೀರನಹ್ಳ್ಳಿ । ಕೋಟೆಚೆಂಗದಮುದ್ದಿಕೆದಭೂಮಿಯಲ್ಲುಮೂಡಮುಖವಾಗಿನೆಟ್ಟಕಲ್ಲು ೧ ಇದಕ್ಕೆ ಬ । ಕೋಟೆಚೆಂಗದಯ ಲ್ಲಿ ಗೆಮೂ । ಚೆಂಗಕ್ಕೆ ಪ । ಮೂ

336 ಡಮುಖವಾಗಿನೆಟ್ಟಕ ೧ ಇದಕ್ಕೆ ಮೂ । ಚೆಂಗಕ್ಕೆ ಬ । ಬೀರನಹಳ್ಳಿಯಲ್ಲಿ ಗೆತೆಂ । ಹಳೇಕಾಲ್ವೆಗೆಪ । ತೆಂಕಮುಖವಾಗಿನೆ ಟ್ಟಕ ೧ ಹೊಳೇ

337 ವತ್ತಿನಲ್ಲುನೆಟ್ಟಕಲ್ಲುಗಳು । ಹೊಳೇವತ್ತಿನಹೊಲಕ್ಕೆ ಈಶಾನ್ಯ । ಪಡುವಮುಖವಾಗಿನೆಟ್ಟಕ ೧ । ಇದಕ್ಕೆ ತೆಂ । ಹಂಪಾಪುರ ದಗದ್ದೆಗೆಪ । ಪಡು

338 ವಮುಖವಾಗಿನೆಟ್ಟಕ ೧ ಇದಕ್ಕೆ ಮೂ । ಯಡಹಳ್ಳೀಹೊಲಕ್ಕೆ ಪ । ಪಡುವಮುಖವಾಗಿನೆಟ್ಟಕ ೧ ಇದಕ್ಕೆ ತೆಂ । ಹೊಳೆಗೆ ಬ । ಪಡುವಮುಖವಾಗಿ

339 ನೆಟ್ಟಕ ೧ ಇದಕ್ಕೆ ಪ । ಹಂಪಾಪುರದಗದ್ದೆಗೆಮೂ । ತೆಂಕಮುಖವಾಗಿನೆಟ್ಟಕ ೧ ಇದಕ್ಕೆ ಬ । ಹಂಪಾಪುರದಕಾಲ್ವೆಗೆತೆಂ । ತೆಂಕಮುಖವಾಗಿನೆ

340 ಟ್ಟಕ ೧ ಇದಕ್ಕೆ ಬ । ಹಂಪಾಪುರದಗದ್ದೆಗೆತೆಂಕಲುಮೂಡಮುಖವಾಗಿನೆಟ್ಟಕಲ್ಲು ೧ ಅಂತುಚೆಂಗಕ್ಕೆ ನೆಟ್ಟಕಲ್ಲು ೧೪ ಹಂಪಾ ಪುರದಗ್ರಾ

341 ಮ ೮ ಕ್ಕೆ ಕಲ್ಲು ೧೦೨ ಅರ್ಜುನಹಳ್ಳಿಗೆಕಲ್ಲನೆಟ್ಟವಿವರ । ಈಗ್ರಾಮಕ್ಕೆ ಈಶಾನ್ಯ । ಮಾಚೇನಹಳ್ಳೀಯಲ್ಲಿ ಗೆತೆಂ । ತಾಳೇಮಂ ಡಿಗೆ ಪ । ನೈರು

342 ತ್ಯಮುಖವಾಗಿನೆಟ್ಟಕಲ್ಲು ೧ ಇದಕ್ಕೆ ಮೂ । ಮಾಚೇನಹಳ್ಳೀಯಲ್ಲಿ ಗೆತೆಂ । ಗಲಗೆಕೆರೆಯಲ್ಲಿ ಗೆಪ । ಅರ್ಜುನಹಳ್ಳಿಗೆಮೂ । ಪಡುವಮುಖವಾಗಿನೆಟ್ಟಕಲ್ಲು ೧

343 ಇದಕ್ಕೆ ತೆಂ । ಗಲಗಕೆರೆಯಲ್ಲಿ ಗೆಪ । ಅರ್ಜುನಹಳ್ಳಿಗೆಮೂ । ಹೇಲದಮರಕ್ಕೆ ಬ । ಬಡಗಮುಖವಾಗಿನೆಟ್ಟಕ ೧ । ಇದಕ್ಕೆ ತೆಂ। ಕಾರ್ರಿಗಹಳ್ಳಿಕೊಪ್ಪ

344 ಲಿಗೆಮೂ । ಗಲಗಕೆರೆಯಲ್ಲಿ ಗೆಪ । ಪಡುವಮುಖವಾಗಿನೆಟ್ಟಕಲ್ಲು ೧ ಇದಕೆತೆಂ । ಗಲಗೆಕೆರೆಕಲ್ಲಿಗೆಪ । ಬಸವನಹಳ್ಳೀಕಲ್ಲಿ ಗೆಬ । ಅ

345 ರ್ಜುನಹಳ್ಳಿಗೆಆಗ್ನೇಯ । ವಾಯುವ್ಯಮುಖವಾಗಿನೆಟ್ಟಕ ೧ ಇದಕ್ಕೆ ಪ । ಬೈರಾಪುರದಕಲ್ಲಿಗೆಬ । ಅರ್ಜುನಹಳ್ಳಿಗೆತೆಂ । ವತ್ತಿ ನಲ್ಲುಬಡಗಮುಖ

346 ವಾಗಿನೆಟ್ಟಕಲ್ಲು ೧ ಇದಕ್ಕೆ ಪ । ಬಾಲೂರಈಶಾನ್ಯದಕಲ್ಲಿಗೆಬ । ಅರ್ಜುನಹಳ್ಳಿಗೆತೆಂ । ಬಡಗಮುಖವಾಗಿನೆಟ್ಟ ೧

೫ನೇ ಪತ್ರದ ಹಿಂಭಾಗ.

347 ಇದಕ್ಕೆ ಪ । ಯಡಹಳ್ಳಿಬಾಲೂರಕಲ್ಲಿಗೆಸಹಬ । ಯಡಹಳ್ಳಿಗೆಮೂ । ಅರ್ಜುನಹಳ್ಳಿಗೆತೆಂ । ಬಡಗಮುಖವಾಗಿನೆಟ್ಟಕಲ್ಲು ೧ ಇದ

348 ಕ್ಕೆ ಪ । ಯಡೆಹಳ್ಳಿಗಂಧನಹಳ್ಳಿಕಲ್ಲಿಗೆಸಹಮೂ । ಚಿಕ್ಕವಡ್ಡರಗುಡೀಕಲ್ಲಿಗೆತೆಂ । ಬಡಗಮುಖವಾಗಿನೆಟ್ಟಕ ೧ ಇದಕ್ಕೆ ಪ । ಚಿಕ್ಕವಡ್ಡರ

349 ಗುಡೀಕಲ್ಲಿಗೆತೆಂ । ಯಿಾಹೊಲಕ್ಕೆ ಮೂ । ಮೂಡಮುಖವಾಗಿನೆಟ್ಟಕ ೧ ಇದಕ್ಕೆ ತೆಂ । ಚಿಕ್ಕವಡ್ಡರಗುಡೀಕಲ್ಲಿಗೆಮೂ । ಅ ರ್ಜುನಹಳ್ಳೀಕಲ್ಲಿಗೆಪ । ಮೂಡಮು

350 ಖವಾಗಿನೆಟ್ಟಕ ೧ ಇದಕ್ಕೆ ಪ । ಚಿಕ್ಕವಡ್ಡರಗುಡೀಕಲ್ಲಿಗೆತೆಂ । ಯರಣಾಲದಮರದತಿಟ್ಟಿಗೆಮೂ । ಮೂಡಮುಖವಾಗಿನೆಟ್ಟಕ ೧ ಇದಕೆನೈರುತ್ಯ

351 ಚಿಕ್ಕವಡ್ಡರಗುಡೀಕಲ್ಲಿಗೆಮೂ । ನೆಟ್ಟಕಲ್ಲು ೧ ಇದಕ್ಕೆ ಪ । ಗಂಧನಹಳ್ಳೀಕಲ್ಲಿಗೆಮೂ । ಚಿಕ್ಕವಡ್ಡರಗುಡೀಕಲ್ಲಿಗೆತೆಂ । ಹೊ ಸಊರಯಲ್ಲಿ ಗೆಬ । ಮೂಡಮು

352 ಖವಾಗಿನೆಟ್ಟಕಲ್ಲು ೧ ಇದಕ್ಕೆ ತೆಂ । ಅರ್ಜುನಹಳ್ಳಿಗೆಪ। ಚಿಕ್ಕವಡ್ಡರಗುಡೀಕಲ್ಲಿಗೆಮೂ । ಮೂಡಮುಖವಾಗಿನೆಟ್ಟಕ ೧ ಇದ ಕ್ಕೆ ಬ । ಅರ್ಜುನಹಳ್ಳಿಗೆಪ ।

353 ಯಿಾಹೊಲಕ್ಕೆ ಬ । ಚಿಕ್ಕವಡ್ಡರಗುಡೀಕಲ್ಲಿಗೆತೆಂ । ತೆಂಕಮುಖವಾಗಿನೆಟ್ಟಕ ೧ ಇದಕ್ಕೆ ಮೂ । ಚಿಕ್ಕವಡ್ಡರಗುಡೀಕಲ್ಲಿಗೆ ತೆಂ । ಯಿಾಹೊಲಕ್ಕೆ ಮೂ । ಮೂಡಮು

354 ಖವಾಗಿನೆಟ್ಟಕ ೧ ಇದಕ್ಕೆ ಬ । ಅರ್ಜುನಹಳ್ಳಿಗೆಪ । ಯಿಾಹೊಲಕ್ಕೆ ಮೂ । ತೆಂಕಮುಖವಾಗಿನೆಟ್ಟಕ ೧ ಇದಕ್ಕೆ ಬ । ಚಿ ಕ್ಕವಡ್ಡರಗುಡೀಕಲ್ಲಿಗೆ ಮೂ

355 ಬೊಬ್ಬಲೀಮೆಳಗೆಬ । ಮೂಡಮುಖವಾಗಿನೆಟ್ಟಕ ೧ ಇದಕ್ಕೆಪ । ಚಿಕ್ಕವಡ್ಡರಗುಡೀಕಲ್ಲಿಗೆಬ । ಅರ್ಜುನಹಳ್ಳೀಯಲ್ಲಿಗೆತೆಂ ಕಲವತ್ತಿನಲ್ಲುಬಡಗಮು

356 ಖವಾಗಿನೆಟ್ಟಕ ೧ ಇದಕ್ಕೆವಾಯುವ್ಯ । ಲಿಂಗೈನತೋಟಕ್ಕೆತೆಂ । ಚಿಕ್ಕವಡ್ಡರಗುಡೀಕಲ್ಲಿಗೆಬ । ಈಶಾನ್ಯಮುಖವಾಗಿನೆಟ್ಟಕ ೧ ಯಿದಕ್ಕೆವಾಯುವ್ಯ । ನಂ

357 ಜುಂಡೈನತೋಟಕ್ಕೆತೆಂ । ಚಿಕ್ಕವಡ್ಡರಗುಡೀಕಲ್ಲಿಗೆಬ । ಬೊಮ್ಮೈನಹಳ್ಳೀಕಲ್ಲಿಗೆಮೂ । ಬಡಗಮುಖವಾಗಿನೆಟ್ಟಕ ೧ ಇ ದಕ್ಕೆಬ । ನಂಜುಂಡೈನತೋ

358 ಟಕ್ಕೆಪ । ಬೊಮ್ಮೈನಹಳ್ಳಿಗೆಮೂ । ವೆಂಕಟನಕೆರೆಯೇರೀಮೇಲೆಬ್ರಹ್ಮದೇವರಗುಡಿಬಳಿಯಲ್ಲುಮೂಡಮುಖವಾಗಿನೆಟ್ಟಕ ೧ ಇದಕ್ಕೆಮೂ । ಕಂಚಿನ

359 ಕೆರೆಕಲ್ಲಿಗೆಮೂ । ದೊಡ್ಡವಡ್ಡರಗುಡೀಕಲ್ಲಿಗೆತೆಂ । ಪಡುವಮುಖವಾಗಿನೆಟ್ಟಕ ೧ ಇದಕ್ಕೆಮೂ । ಅರ್ಜುನಹಳ್ಳೀಕಲ್ಲಿಗೆವಾ ಯುವ್ಯ । ಕಂಚಿನ

360 ಕೆರೆಕಲ್ಲಿಗೆತೆಂ । ಕಕ್ಕೇಮೆಳಗೆಮೂ । ತೆಂಕಮುಖವಾಗಿನೆಟ್ಟಕ ೧ ಇದಕ್ಕೆಮೂ । ಅರ್ಜುನಹಳ್ಳಿಗೆಬ । ಕಂಚಿನಕೆರೆಕಲ್ಲಿ ಗೆತೆಂ । ಅರ್ಜುನಹಳ್ಳಿಗದ್ದೆಮೂಣಿ

361 ಗೆಮೂ । ತೆಂಕಮುಖವಾಗಿನೆಟ್ಟಕ ೧ ಇದಕ್ಕೆಮೂ । ಅರ್ಜುನಹಳ್ಳಿಗೆಬ । ಮಾಚೇನಹಳ್ಳಿಮದ್ದಿಕದಹಳ್ಳಕ್ಕೆಪ । ತೆಂಕ ಮುಖವಾಗಿನೆಟ್ಟಕ ೧ ಇದಕ್ಕೆತೆಂ । ಮ

362 ದ್ದಿಕದಹಳ್ಳಕ್ಕೆಮೂ । ಮಾಚೇನಹಳ್ಳಿಯಲ್ಲಿಗೆತೆಂ । ಅರ್ಜುನಹಳ್ಳಿಗೆಬ । ಜೆಳ್ಳೀಮರದತಾಳಿನಲ್ಲುತೆಂಕಮುಖವಾಗಿನೆಟ್ಟ ಕಲ್ಲು ೧ ಅಂತುಕಲ್ಲು ೨೪ ಕಂ

363 ಚಿನಕೆರೆಗ್ರಾಮಕ್ಕೆಕಲ್ಲನೆಟ್ಟವಿವರ । ಈಊರಿಗೆಈಶಾನ್ಯ । ಆಯಪ್ಪನಹಳ್ಳಿಕಲ್ಲಿಗೆತೆಂಕಲು । ದೊಡ್ಡವಡ್ಡರಗುಡೀಕಲ್ಲಿಗೆಆಗ್ನೇ ಯ । ನೈರುತ್ಯಮುಖ

364 ವಾಗಿನೆಟ್ಟಕ ೧ ಇದಕ್ಕೆಆಗ್ನೇಯ । ಆಯಪ್ಪನಹಳ್ಳೀಕಲ್ಲಿಗೆಪ । ಕಂಚಿನಕೆರೆಗೆಮೂ । ಪಡುವಮುಖವಾಗಿನೆಟ್ಟಕಲ್ಲು ೧ ಇ ದಕ್ಕೆಮೂ । ಶಾಂತನಕಕಟ್ಟೆ . . ಆ

365 ಯಪ್ಪನಹಳ್ಳಿಯಲ್ಲಿಗೆತೆಂ । ತೆಂಕಮುಖವಾಗಿನೆಟ್ಟಕಲ್ಲು ೧ ಇದಕ್ಕೆಮೂಡಲುಗೂಡಿದಆಗ್ನೇಯಅಯ್ಯಪ್ಪನಹಳ್ಳೀಕಲ್ಲಿಗೆನೈ ರುತ್ಯಮಾರಗೌಡನಹ

366 ಳ್ಳೀಕಲ್ಲಿಗೆಪ । ನೈರುತ್ಯಮುಖವಾಗಿನೆಟ್ಟಕ ೧ ಇದಕ್ಕೆತೆಂ । ಮಾರುಗೌಡನಹಳ್ಳಿಕಲ್ಲಿಗೆಪ । ಕಂಚಿನಕೆರೆಗೆಮೂ । ಪಡುವ ಮುಖವಾಗಿನೆಟ್ಟಕ ೧ ಇದಕ್ಕೆತೆಂ ।

367 ಮಾರುಗೌಡನಹಳ್ಳಿಕಲ್ಲಿಗೆಪ । ಕಂಚಿನಕೆರೆಗೆಮೂ । ಮಾಚನಹಳ್ಳಿಯಲ್ಲಿಗೆಬ । ಪಡುವಮುಖವಾಗಿನೆಟ್ಟಕ ೧ ಇದಕ್ಕೆಪ । ಕಂಚಿನಕೆರೆಗೆಮೂಡಣಕಟ್ಟೆ

368 ಬ । ಪಡುವಮುಖವಾಗಿನೆಟ್ಟಕ ೧ ಇದಕ್ಕೆಪ । ಅರ್ಜುನಹಳ್ಳೀಕಲ್ಲಿಗೆಬ । ಮಾಚೇನಹಳ್ಳೀಹಳ್ಳಕ್ಕೆಪ । ವಾಯುವ್ಯಮುಖವಾ ಗಿನೆಟ್ಟಕ ೧ ಇದಕ್ಕೆಪ । ಅರ್ಜುನ

369 ಹಳ್ಳಿಗೆಬ । ಕಂಚಿನಕೆರೆಗೆತೆಂ । ಅರ್ಜುನಹಳ್ಳೀಗದ್ದೆಗೆಮೂ । ಬಡಗಮುಖವಾಗಿನೆಟ್ಟಕ ೧ ಇದಕ್ಕೆಪ । ಕಂಚಿನಕೆರೆಗೆತೆಂ । ಅರ್ಜುನಹಳ್ಳಿಗೆಬ । ಕಕ್ಕೇಮರ

370 ಕ್ಕೆಮೂ । ಬಡಗಮುಖವಾಗಿನೆಟ್ಟಕ ೧ ಇದಕ್ಕೆಪ । ಅರ್ಜುನಹಳ್ಳೀಬೀಗವತೋಟದಬಳೀಲಿರುಕಲ್ಲಿಗೆಮೂ । ದೊಡ್ಡವಡ್ಡರ ಗುಡೀಕಲ್ಲಿಗೆತೆಂ । ಮೂಡಮುಖವಾಗಿನೆಟ್ಟಕ ೧

371 ಇದಕ್ಕೆಈಶಾನ್ಯದೊಡ್ಡವಡ್ಡರಗುಡಿಕಲ್ಲಿಗೆತೆಂ । ಕಂಚಿನಕೆರೆಗೆವಾಯುವ್ಯ । ಆಗ್ನೇಯಮುಖವಾಗಿಕ ೧ ಇದಕ್ಕೆಮೂ । ಕಂ ಚಿನಕೆರೆಗೆಬ । ದೊಡ್ಡವಡ್ಡರಗು

372 ಡೀಕಲ್ಲಿಗೆಮೂ । ತೆಂಕಮುಖವಾಗಿನೆಟ್ಟಕ ೧ ಇದಕ್ಕೆಮೂ । ದೊಡ್ಡವಡ್ಡರಗುಡೀಕಲ್ಲಿಗೆತೆಂ । ಕಂಚಿನಕೆರೆಗೆಬ । ಪಟ್ಟಣ ದಮ್ಮನಗುಡಿಗೆಪ । ತೆಂಕಮುಖವಾಗಿನೆಟ್ಟ

373 ಕ ೧ ಇದಕ್ಕೆಬ । ದೊಡ್ಡವಡ್ಡರಗುಡೀಕಲ್ಲಿಗೆಮೂಡಲುಗೂಡಿದಈಶಾನ್ಯಈಊರಿಗೆತೆಂ । ಕಂಚಿನಕೆರೆಯಲ್ಲಿಗೆಪಡುವವತ್ತಿನಲ್ಲು ತೆಂಕಮುಖವಾಗಿನೆಟ್ಟಕ ೧

374 ಅಂತುಕಲ್ಲು ೧೪ ಚಿಕ್ಕವಡ್ಡರಗುಡೀಗ್ರಾಮಕ್ಕೆ ಕಲ್ಲನೆಟ್ಟವಿವರ । ಬೊಮ್ಮೇನಹಳ್ಳೀಕಲ್ಲಿಗೆತೆಂ । ಅರ್ಜುನಹಳ್ಳೀಕಲ್ಲಿಗೆಪ । ಈ ಊರಿಗೆಬಡಗಣವತ್ತಿನಲ್ಲು

375 ತೆಂಕಮುಖವಾಗಿನೆಟ್ಟಕ ೧ ಇದಕ್ಕೆ ಆಗ್ನೇಯಅರ್ಜುನಹಳ್ಳೀಕಲ್ಲಿಗೆತೆಂ । ಲಿಂಗೈನತೋಟಕ್ಕೆಪ । ಈಊರಿಗೆಮೂ । ನೈರುತ್ಯ ಮುಖವಾಗಿನೆಟ್ಟಕ ೧ ಇದಕ್ಕೆಮೂ । ಅ

376 ರ್ಜುನಹಳ್ಳೀಕಲ್ಲಿಗೆತೆಂ । ಈಊರಿಗೆಈಶಾನ್ಯ । ನೈರುತ್ಯಮುಖವಾಗಿನೆಟ್ಟಕಲ್ಲು ೧ ಇದಕ್ಕೆತೆಂ । ಅರ್ಜುನಹಳ್ಳೀಕಲ್ಲಿಗೆಪ । ಬೊಬ್ಬಲೀಮೆಳೆಗೆಬ । ಪಡುವಮುಖವಾಗಿನೆಟ್ಟ

377 ಕಲ್ಲು ೧ ಇದಕ್ಕೆತೆಂ । ಅರ್ಜುನಹಳ್ಳೀಹೊಲಕ್ಕೆಪ । ಅರ್ಜುನಹಳ್ಳೀಕಲ್ಲಿಗೆಬ । ವಾಯುವ್ಯಮುಖವಾಗಿನೆಟ್ಟಕ ೧ ಇದಕ್ಕೆಪ । ಅರ್ಜುನಹಳ್ಳೀಕಲ್ಲಿಗೆಬ । ಈಊರಿಗೆತೆಂ । ಈಊರ

378 ಹೊಲಕ್ಕೆಮೂ । ಮೂಡಮುಖವಾಗಿನೆಟ್ಟಕ ೧ ಇದಕ್ಕೆತೆಂ । ಅರ್ಜುನಹಳ್ಳೀಕಲ್ಲಿಗೆಬ । ಈಹೊಲಕ್ಕೆಪ । ವಾಯುವ್ಯಮು ಖವಾಗಿನೆಟ್ಟಕ ೧ ಇದಕ್ಕೆಪ । ಅರ್ಜುನಹಳ್ಳೀಕಲ್ಲಿಗೆ

379 ಬ । ಈಊರಿಗೆತೆಂ । ಬಡಗಮುಖವಾಗಿನೆಟ್ಟಕ ೧ ಇದಕ್ಕೆತೆಂ । ಅರ್ಜುನಹಳ್ಳೀಕಲ್ಲಿಗೆಪ । ಈಹೊಲಕ್ಕೆಬ । ಬಡಗಮುಖ ವಾಗಿನೆಟ್ಟಕ ೧ ಇದಕ್ಕೆಪ । ಅರ್ಜುನಹ

380 ಳ್ಳೀಕಲ್ಲಿಗೆಬ । ಯರಡಾಲದತಿಟ್ಟಗೆಮೂ । ಪಡುಪಮುಖವಾಗಿನೆಟ್ಟಕ ೧ ಇದಕ್ಕೆತೆಂ । ಅರ್ಜುನಹಳ್ಳೀಕಲ್ಲಿಗೆಪ । ವಾಜನಕ ಟ್ಟೆಸಮೀಪದಲ್ಲಿಪಡುವಮುಖವಾ

381 ಗಿನೆಟ್ಟಕ ೧ ಇದಕ್ಕೆನೈರುತ್ಯ । ಗಂಧನಹಳ್ಳೀಕಲ್ಲಿಗೆಮೂ । ಅರ್ಜುನಹಳ್ಳೀಕಲ್ಲಿಗೆಬ । ಬಡಗಮುಖವಾಗಿನೆಟ್ಟಕ ೧ ಇದಕ್ಕೆ ಬ । ಗಂಧನಹಳ್ಳಿಕಲ್ಲಿಗೆಮೂ । ಈಊ

382 ರಿಗೆಪ । ಮೂಡಮುಖವಾಗಿನೆಟ್ಟಕ ೧ ಇದಕ್ಕೆಬ । ಗಂಧನಹಳ್ಳಿಕಲ್ಲಿಗೆಮೂ । ಬೊಮ್ಮೇನಹಳ್ಳಿಕಲ್ಲಿಗೆತೆಂ । ಮೂಡಮುಖ ವಾಗಿನೆಟ್ಟಕ ೧ ಇದಕ್ಕೆಬ । ಬೊಮ್ಮೇನ

383 ಹಳ್ಳಿಗೆತೆಂ । ಹುಲುಕನಕಟ್ಟೆಹಳ್ಳಕ್ಕೆಮೂ । ಮೂಡಮುಖವಾಗಿನೆಟ್ಟಕ ೧ ಇದಕ್ಕೆಮೂ । ಬೊಮ್ಮನಹಳ್ಳೀಕಲ್ಲಿಗೆಪ । ಚೆಂ ನುವೀರನಹೊಲಕ್ಕೆತೆಂ । ತೆಂಕಮುಖ

384 ವಾಗಿನೆಟ್ಟಕ ೧ ಇದಕ್ಕೆಬ । ಬೊಮ್ಮೇನಹಳ್ಳಿಕಲ್ಲಿಗೆಮೂ । ಈಹೊಲಕ್ಕೆತೆಂ । ಚಿಕ್ಕವಡ್ಡರಗುಡಿಗೆಪ । ಮೂಡಮುಖವಾಗಿ ನೆಟ್ಟಕ ೧ ಇದಕ್ಕೆಮೂ । ಬೊಮ್ಮನ

385 ಹಳ್ಳೀಕಲ್ಲಿಗೆತೆಂ । ಚಿಕ್ಕವಡ್ಡರಗುಡಿಗೆಪ । ತೆಂಕಮುಖವಾಗಿನೆಟ್ಟಕಲ್ಲು ೧ ಅಂತುಕಲ್ಲು ೧೮ ಬೊಮ್ಮೇನಹಳ್ಳಿಗ್ರಾಮಕ್ಕೆ ಕಲ್ಲ ನೆಟ್ಟವಿವರ । ಬೊಮ್ಮೇ

386 ನಹಳ್ಳಿಗೆಈಶಾನ್ಯ । ಹೊಸಾಗ್ರಹಾರದಯಲ್ಲೆಗೆತೆಂ । ದೊಡ್ಡವಡ್ಡರಗುಡೀಯಲ್ಲೆಗೆಪ । ಸಿದ್ಧಲಿಂಗವಡೇರಕಟ್ಟೆಗೆಮೂಡವಾರಿ ಯಲ್ಲುನೈರುತ್ಯ

387 ಮುಖವಾಗಿನೆಟ್ಟಕ ೧ ಇದಕ್ಕೆತೆಂ । ಬೊಮ್ಮೇನಹಳ್ಳಿಗೆಮೂ । ಚಿಕ್ಕೈನತೋಟಕ್ಕೆಬ । ಈಚಿಕ್ಕೈನಅಣೆಕೋಡೀಪಡುವವಾ ರಿಯಲ್ಲುಪಡುವಮುಖವಾಗಿನೆಟ್ಟಕ ೧ ಇದಕ್ಕೆತೆಂ ।

388 ನಂಜುಂಡೈನತೋಟಕ್ಕೆಪ । ಬೊಮ್ಮನಹಳ್ಳಿಗೆಮೂ । ವೆಂಕಟನಕೆರೆಯೇರೀಮೇಲೆಬ್ರಹ್ಮದೇವರಗುಡೀಬಳಿಯಪಡುವಮುಖ ವಾಗಿನೆಟ್ಟಕ ೧ ಇದಕ್ಕೆಆಗ್ನೇಯನಂಜುಂಡೈ

389 ನತೋಟಕ್ಕೆತೆಂ । ಚಿಕ್ಕವಡ್ಡರಗುಡೀಕಲ್ಲಿಗೆಬ । ಈಊರಕೆರೆಕೋಡಿಯಲ್ಲುಪಡುವಮುಖವಾಗಿನೆಟ್ಟಕ ೧ ಇದಕ್ಕೆನೈರುತ್ಯ ಕೂಡಿದತೆಂ । ಚಿಕ್ಕವಡ್ಡರಗುಡೀ

390 ಕಲ್ಲಿಗೆಬ । ಯಲವದಮರಕ್ಕೆಮೂ । ಬಡಗಮುಖವಾಗಿನೆಟ್ಟಕ ೧ ಇದಕ್ಕೆಪ । ಬೊಮ್ಮೇನಹಳ್ಳಿಗೆತೆಂ । ವಾಜರಚೆಂನುವೀ ರನಹೊಲಕ್ಕೆಮೂ । ಚಿಕ್ಕವಡ್ಡರಗುಡೀಕಲ್ಲಿ

391 ನಪಡುವಣವತ್ತಿನಲ್ಲುಪಡುವಮುಖವಾಗಿನೆಟ್ಟಕ ೧ ಇದಕ್ಕೆತೆಂ । ಚಿಕ್ಕವಡ್ಡರಗುಡೀಹೊಲಕ್ಕೆಪ । ಈಊರಹೊಲಕ್ಕೆಬ । ವೆಂಕಟನಮಾವಿನತಾಳಿಗೆಮೂ । ಬಡಗಮುಖ

392 ವಾಗನೆಟ್ಟಕ ೧ ಇದಕ್ಕೆಪ । ಬೊಮ್ಮೇನಹಳ್ಳಿಯಲ್ಲೆಗೆಮೂ । ಬೊಮ್ಮೇನಹಳ್ಳಿಚೆಂನವಡೇರಹೊಲಕ್ಕೆಬ । ಪಡವಮುಖವಾ ಗಿನೆಟ್ಟಕ ೧ ಇದಕ್ಕೆತೆಂ । ಗಂಧನಹಳ್ಳಿಈಗೆ

393ಶಾನ್ಯದಕಲ್ಲಿಗೆಬ । ಚಿಕ್ಕವಡ್ಡರಗುಡೀಕಲ್ಲಿಗೆಪ । ಬಡಗಮುಖವಾಗಿನೆಟ್ಟಕ ೧ ಇದಕ್ಕೆಪ । ಗಂಧನಹಳ್ಳಿಕಲ್ಲಿಗೆಬ । ಬೊ
ಮ್ಮೇನಹಳ್ಳಿಗೆನೈರುತ್ಯಕಾಕನ
394ಹಳ್ಳೀಯಲ್ಲೆಮೂ । ಈಶಾನ್ಯಮುಖವಾಗಿನೆಟ್ಟಕ ೧ ಇದಕ್ಕೆತೆಂ । ಕಾಕನಹಳ್ಳೀಯಲ್ಲೆಗೆಮೂ । ಬೊಮ್ಮೇನಹಳ್ಳೀಗೆಪ ।
ಬೊಮ್ಮೇನಹಳ್ಳಿಲಿಂಗಮುದ್ರೇಕಲ್ಲಿಗೆತೆಂ ।
395ಮೂಡಮುಖವಾಗಿನೆಟ್ಟಕ ೧ ಇದಕ್ಕೆಬ । ಬೊಮ್ಮೇನಹಳಿ ಲಿಂಗಮುದ್ರೆಹುಟ್ಟಕಲ್ಲಿಗೆಮೂ । ಈಹಳ್ಳಿಗೆಪ । ಕರೀಕಲ್ಲುಮ
ರುಡಿಗೆತೆಂ । ಆಗ್ನೇಯಮುಖವಾಗಿನೆಟ್ಟ
396ಕಲ್ಲು ೧ ಇದಕ್ಕೆಮೂ । ಬೊಮ್ಮೇನಹಳ್ಳಿಗೆಪ । ಮಲೇವಡೇರಕಟ್ಟೆಗೆಬ । ಹೊಸಅಗ್ರಹಾರದಕಲ್ಲಿಗೆಆಗ್ನೇಯ । ವತ್ತಿನಲ್ಲೂ
ಮೂಡಮುಖವಾಗಿಕ ೧ ಇದಕ್ಕೆ
397ಪ । ಹೊಸಅಗ್ರಹಾರದತೋಟಕ್ಕೆಪ । ಈಯಲ್ಲೆಗೆತೆಂ । ಬೊಮ್ಮೇನಹಳ್ಳೀಯಲ್ಲಿ ಪುಜ್ಜಳಮರದಬಡಗಣವತ್ತಿನಲ್ಲುತೆಂಕಮು
ಖವಾಗಿನೆಟ್ಟಕ ೧

(ಮುಂದಿನ ಪತ್ರಗಳು ದೊರೆಯಲಿಲ್ಲ)

59

ಅದೇ ಹೋಬಳಿ ಗಳಗೇಕೆರೆ ಗ್ರಾಮದ ಊರುಬಾಗಲ ಬಳಿ ನೆಟ್ಟ ಕಲ್ಲಿನಲ್ಲಿ.

ಪ್ರಮಾಣ 6′ × 2′ 6″.

1ಶುಭಮಸ್ತು ಸ್ವಸ್ತಿಶ್ರೀಜಯಾಭ್ಯುದಯಶಾಲಿ
2ವಾಹನಶಕವರುಷ ೧೫೫೮ ಸಂದವೋಲೆವರ್ತಮಾ
3ನವಾದಧಾತುಸಂವತ್ಸರದಪುಷ್ಯಶುದ್ಧ ೧೩ ಸಾಮ್ಯ
4ವಾಸರದಲುಶ್ರೀಮನ್ಮಹಾಮಂಡಳೇಶ್ವರಶ್ರೀಮದ್ರಾಜಾ
5ಧಿರಾಜರಾಜಪರಮೇಶ್ವರಶ್ರೀವೀರಪ್ರತಾಪಶ್ರೀರಂಗದೇ
6ವಮಹಾರಾಯರುಪೆನುಗುಂಡಿಯಲಿರತ್ನಸಿಂಹಾಸನಾರೂ
7ಢರಾಗಿಪೃಥ್ವೀರಾಜ್ಯಂಗೆಯ್ಯುತ್ತಿರಲುಶ್ರೀಮತುಸಿಂದುಗೋವಿಂದಸಿ
8ತಕರಗಂಡಧವಳಾಂಕಭೀಮಮಣಿನಾಗಪುರವರಾಧೀಶ್ವರಬಿರಿದಸ
9ಪ್ತಾಂಗಹರಣತುರುಕದಳವಿಭಾಡಶ್ರೀಬಯ್ಯಪ್ಪನಾಯಕರ
10ಕೃಷ್ಣಪ್ಪನಾಯಕರಕೊಮಾರವೆಂಕಟಪ್ಪನಾಯಕಯ್ಯನವರುಕಾಶ್ಯ
11ಪಗೋತ್ರದಆಪಸ್ತಂಬಸೂತ್ರದಯಜುಶಾಖಾಧ್ಯಾಯಿಗಳಾದರಾ
12ಮಚಂದ್ರಭಟ್ಟರಮಕ್ಕಳುವಿಠಲಭಟ್ಟರಿಗೆಕೊಟ್ಟಅಗ್ರಹಾರಭೂ
13ದಾನಧರ್ಮಶಾಸನದಕ್ರಮವೆಂತೆಂದರೆಹೊಯ್ಸಣರಾಜ್ಯದಲಂ . .
14ಕಾವೇರೀಮಧ್ಯದನರಸಿಂಹಪುರದಸೀಮೆಗೆಸಲುವಹಂಪಾಪುರದಸ್ಥ
15ಳದಗಳಗೆಕೆರೆಗೆಪ್ರತಿನಾಮವಾದರಾಮಾಪು[ರ]ವೆಂಬಅಗ್ರಹಾರವನೂನಾಲು
16ಜೀರ್ಣೋದ್ಧಾರವನುಮಾಡಿನಂಮತಾಯಿರಾಮಂಮನವರಿಗೆಪುಣ್ಯವಾಗಬೇ
17ಕೆಂದುಆಗ್ರಾಮಕೆಉಂಟಾದಬಾಡಿಬೇಡಿಗೆಕಾಣಿಕೆಕಡಾಯಕೂಟಜೇಟಿಬಿಟ್ಟಿಪೇಗಾ
18ರಸುಂಕತಳವಾರಿಕೆಯಿಉಮೊದಲಾದಯಿಾತಿಬಾಧೆಗಳುಏನೂಯಿಲಾಎಂದು
19ಸರ್ವಮಾನ್ಯವಾಗಿಬಯ್ಯಪ್ಪನಾಯಕರಕೃಷ್ಣಪ್ಪನಾಯಕರಕೊಮಾರವೆಂಕ
20ಟಪ್ಪನಾಯಕಅಯ್ಯನವರುಕಾಶ್ಯಪಗೋತ್ರದಆಪಸ್ತಂಬಸೂತ್ರದಯಜುಶಾಖೆಯರಾ
21ಮಚಂದ್ರಭಟ್ಟರಮಕ್ಕಳುವಿಠಲಭಟ್ಟರಿಗೆಹೇಮಾವತಿಯತೀರದಲ್ಲಿಶ್ರೀನರಸಿಂಹ

22 ದೇವರಸಂನಿಧಿಯಲ್ಲಿಮಕರಸಂಕ್ರಾಂತಿಪುಂಣ್ಯಕಾಲದಲಿನೆಂಮತಾಯಿ
23 ರಾಮಂಮನವರಿಗೆಪುಣ್ಯವಾಗಬೇಕೆಂದುನಾಉನಿಮಗೆಮಿರಾವಮಾಪು
24 ರವೆಂಬಅಗ್ರಹಾರವನುಸಹಿರಂಣ್ಯೋದಕದಾನಧಾರಾಪೂರ್ವಕವಾಗಿಧಾ
25 ರೆಯನೆಱದುಕೊಟ್ಟೆವಾಗಿನೀಉಯಿಗ್ರಾಮಕೆಸಲುವಚತುಸ್ಸೀಮೆಒಳಗುಳ
26 ನಿಧಿನಿಕ್ಷೇಪಜಲಪಾಷಾಣಅಕ್ಷೀಣಿಆಗಾಮಿಸಿದ್ಧಸಾಧ್ಯಂಗಳೆಂಬಅ
27 ಷ್ಟಭೋಗತೇಜಸ್ವಾಮ್ಯಸಹಿತವಾಗಿನಿಮಗೆಅಧಿಕ್ರಯದಾನಪರಿವರ್ತ್ತ
28 ನಕ್ಕೆಯೋಗ್ಯವಾಗಿನೀಉನಿಂಮ್ಮಪುತ್ರಪೌತ್ರಪಾರಂಪರೆಯಾಗಿಚಂ
29 ದ್ರಾರ್ಕಸ್ಥಾಯಿಗಳಾಗಿನೀಉಯಿರಾವಮಾಪುರವನೂಸುಖದಲ್ಲಿಅನು
30 ಭವಿಸಿಕೊಂಡುಬಹಿರಿಎಂದುಬಯಿಯಪ್ಪನಾಯಕರಕೃಷ್ಣಪ್ಪ
31 ನಾಯಕರಕೊಮಾರವೆಂಕಟಪ್ಪನಾಯಕ್ಕೈಯ್ಯನವರುಕಾಶ್ಯಪಗೋ
32 ತ್ರದಆಪಸ್ತಂಭಸೂತ್ರದಯಜುಶಾಖೆಯರಾಮಚಂದ್ರಭಟರವ
33 ಕಳುವಿಠಲಭಟ್ಟರಿಗೆಕೊಟ್ಟಂಥಾಅಗ್ರಹಾರಜೀರ್ಣೋದ್ಧಾರದಧರ್ಮ
34 ಶಾಸನಶ್ರೀವೆಂಕಟಾದ್ರಿಶ್ರೀಶ್ರೀಶ್ರೀಸ್ವದತ್ತಾದ್ವಿಗುಣಂಪುಣ್ಯಂ
35 ಪರದತ್ತಾನುಪಾಲನಂ । ಪರದತ್ತಾಪಹಾರೇಣಸ್ವದತ್ತಂನಿಷ್ಫಲಂಭ
36 ವೇತ್ ॥ ದಾನಪಾಲನಯೋರ್ಮಧ್ಯೇದಾನಾಚ್ಛ್ರೇಯೋನುಪಾಲನಂ । ದಾ
37 ನಾತ್ಸ್ವರ್ಗ್ಗಮವಾಪ್ನೋತಿಪಾಲನಾದಚ್ಯುತಂಪದಂ ॥ ಯಿಧರ್ಮಕೆಅ
38 ವನಾರೊಬ್ಬನುಅಳುಪಿದರೆತಂಮ್ಮತಾಯಿತಂದೆಗಳವಾರಣಾಸಿಲಿ
39 ವಧಿಸಿಭುಂಜಿಸ್ತಪಾಪಕ್ಕೆಹೋಹನು ॥ ಮಹಿಮಾನಕೆಯಿಲ್ಲದವನುಶ್ರೀ

60

ಅದೇ ಗ್ರಾಮದಲ್ಲಿ ಹಳೇ ಹಗೇವಿನಲ್ಲಿ ಸಿಕ್ಕಿದ್ದ ತಾಮ್ರ ಶಾಸನ.

ಪತ್ರಗಳು ೫. —ಪೂರ್ವದ ಹಳಗನ್ನಡಕ್ಷರ.

೧ನೇ ಪತ್ರದ ಹಿಂಭಾಗ.

1 ಸ್ವಸ್ತಿಜಿತಂಭಗವತಾಗತಘನಗಗನಾಭೇನಪದ್ಮನಾಭೇನಶ್ರೀಮಜ್ಜಾಹ್ನ
2 ವೇಯಕುಲಾಮಲವ್ಯೋಮಾವಭಾಸನಭಾಸ್ಕರಃಸ್ವಖಡ್ಗೈಕಪ್ರಹಾರಖಣ್ಡಿತಮಹಾ
3 ಶಿಲಾಸ್ತಮ್ಭಲಬ್ಧಬಲಪರಾಕ್ರಮೋದಾರುಣಾರಿಗಣವಿದಾರಣೋಪಲಬ್ಧವ್ರಣವಿಭೂಷ
4 ಣವಿಭೂಷಿತಃಕಾಣ್ವಾಯನಸಗೋತ್ರಃಶ್ರೀಮತ್ಕೊಂಗುಣಿವರ್ಮ್ಮಧರ್ಮ್ಮಮಹಾಧಿರಾಜಃತಸ್ಯಪುತ್ರಃ
5 ಪಿತುರನ್ವಾಗತಗುಣಯುಕ್ತೋವಿದ್ಯಾವಿನಯವಿಹಿತವೃ*ಂತ್ತಂಸಮ್ಯಕ್ಪ್ರಜಾಪಾಲನಮಾ
6 ತ್ರಾಧಿಗತರಾಜ್ಯಪ್ರಯೋಜನೋವಿದ್ವತ್ಕವಿಕಾಂಚನನಿಕಷೋಪಲಭೂತೋನೀತಿಶಾಸ್ತ್ರಸ್ಯವಕ್ತೃಪ್ರ
7 ಯೋಕ್ತೃಕುಶಲೋದಂತಕಸೂತ್ರವೃತ್ತೇಃಪ್ರಣೇತಾಶ್ರೀಮಾನ್ಮಾಧವಮಹಾಧಿರಾಜಃತಸ್ಯಪುತ್ರಃಪಿ
8 ತೃಪೈತಾಮಹಗುಣಯುಕ್ತೋನೇಕಚಾತುರ್ದ್ದನ್ತಯುದ್ಧಾವಾಪ್ತಚತುರುದಧಿಸಲಿಲಾಸ್ವಾದಿತ
9 ಯಶಾಃಶ್ರೀಮದ್ಧರಿವಂರ್ಮಮಹಾಧಿರಾಜಃತತ್ಪುತ್ರಃದ್ವಿಜಗುರುದೇವತಾಪೂಜನಪರೋನಾ

೨ನೇ ಪತ್ರದ ಮುಂಭಾಗ.

10 ರಾಯಣಚರಣಾನುಧ್ಯಾತಶ್ರೀಮದ್ವಿಷ್ಣುಗೋಪಮಹ ಧಿರಾಜಃತತ್ಪುತ್ರಃತ್ರ್ಯಮ್ಬಕಚರಣಾಮ್ಭೋ
11 ರುಹರಜಃಪವಿತ್ರೀಕೃತೋತ್ತಮಾಙ್ಗಃಸ್ವಭುಜಬಲಪರಾಕ್ರಮಕ್ರಯಕ್ರೀತರಾಜ್ಯಃಕಲಿಯುಗಬ

* ಅಕ್ಷರದಮೇಲೆ ಮೂಲಪ್ರತಿಯಂತೆ ಹಾಕಲ್ಪಟ್ಟ ಬಿಂದುಗಳು ಪ್ರಾಕೃತದ ಬರವಣಿಗೆ ಪ್ರಕಾರ ಪರಸವರ್ಣಕ್ಕೆ ದ್ವಿತ್ವವನ್ನು ಸೂಚಿಸುತ್ತವೆ.

12 ಲಪಂಕಾವಸನ್ನಧರ್ಮ್ಮವೃಷೋದ್ಧರಣನಿತ್ಯಸನ್ನದ್ಧಃಶ್ರೀಮನ್ಮಾಧವಮಹಾಧಿರಾಜಃತತ್ಪುತ್ರಃ
13 ವಿದ್ಯಾವಿನಯಾತಿಶಯಪರಿಪೂರಿತಾತ್ಮಾನಿರವಗ್ರಹಪ್ರಧಾನಶೌರ್ಯ್ಯಃಶ್ರೀಮದವಿನೀತನಾ
14 ಮಧೇಯಃತತ್ಪುತ್ರಃವಿಜೃಂಭಮಾಣಶಕ್ತಿತ್ರಯಃಆನ್ದರಿಆಲಂತೂರ್ತ್ತೊಪ್ಪೆರುಳಱುವೇಣ್ಣಿ
15 ಗರಾದ್ಯನೇಕಸಮರಮುಖಮಖಹುತಪ್ರಹತಶೂರಪುರುಷಪಸೂಪಹಾರವಿಘಸವಿ
16 ಹಸ್ತೀಕೃತಾನ್ತಾಗ್ನಿಮುಖಃಕಿರಾತಾರ್ಜ್ಜುನೀಯಪಞ್ಚದಶಸರ್ಗ್ಗಟೀಕಾಕಾರಃದುರ್ವ್ವಿನೀತನಾಮಧೇಯಃತ
17 ತ್ಪುತ್ರಃದುದ್ದಾನ್ತವಿಮರ್ದ್ದವಿಮೃದಿತವಿಶ್ವಮ್ಭರಾಧಿಪಮೌಲಿಮಾಲಾಮಕರನ್ದಪುಞ್ಜಪಿಞ್ಜರೀಕ್ರಿಯಮಾ
18 ಣಚರಣಯುಗಲನಲಿನಮುಷ್ಕರನಾಮಧೇಯಃತಸ್ಯಪುತ್ರಃಚತುರ್ದ್ದಶವಿದ್ಯಾಸ್ಥಾನಾಧಿಗತವಿ

೧ನೇ ಪತ್ರದ ಹಿಂಭಾಗ.

19 ಮಲಮತಿಃವಿಶೇಷತೋನವಶೇಷಸ್ಯನೀತಿಶಾಸ್ತ್ರಸ್ಯವಕ್ತೃಪ್ರಯೋಕ್ತೃಕುಶಲೋರಿಪುತಿ
20 ಮಿರನಿಕರನಿರಾಕರಣೋದಯಭಾಸ್ಕರಃಶ್ರೀವಿಕ್ರಮಪ್ರಥಿತನಾಮಧೇಯಃತತ್ಪುತ್ರಃ
21 ಅನೇಕಸಮರಸಂಪಾದಿತವಿಜೃಂಭಿತದ್ವಿರದರದನಾಕುಲಿಶಾಭಿಘಾತಃವ್ರಣಸಂರೂ
22 ಢಭಾಸ್ವದ್ವಿಜಯಲಕ್ಷಣಲಕ್ಷೀಕೃತವಿಶಾಲವಕ್ಷಸ್ಥಲಃಸಮಧಿಗತಸಕಲಶಾಸ್ತ್ರ
23 ರ್ತ್ಥತತ್ವಂಸಮಾರಾಧಿತತ್ರಿವರ್ಗ್ಗಃನಿರವದ್ಯಚರಿತಃಪ್ರತಿದಿನಮಭಿವರ್ದ್ಧಮಾನಪ್ರಭಾ
24 ವೋಭೂವಿಕ್ರಮನಾಮಧೇಯಃಅಪಿಚನಾನಾಹೇತಿಪ್ರಹಾರಪ್ರವಿಘಟಿತಭಟೋರಃಕವಾ
25 ಟೋತ್ಥಿತಾಸೃಕ್ಧಾರಾಸ್ವಾದಪ್ರಮತ್ತದ್ವಿಪಶತಚರಣಕ್ಷೋದಸಂಮರ್ದಭೀಮೇಸಂಗ್ರಾಮೇಪಲ್ಲವೇ
26 ನ್ದ್ರನ್ನರಪತಿಮಜಯದ್ಯೋವಿಳನ್ದಾಭಿಧಾನೇರಾಜಾಶ್ರೀವಲ್ಲಭಾಖ್ಯಸಮರಶತಜಯಾವಾಪ್ತ
27 ಲಕ್ಷ್ಮೀವಿಶಾಲಃತಸ್ಯಕೊಂಗುಣಿಮಹಾರಾಜಸ್ಯಶಿವಮಾರಾಪರನಾಮಧೇಯಃತಸ್ಯಪೌತ್ರಃ

೨ನೇ ಪತ್ರದ ಮುಂಭಾಗ.

28 ಸಮವನತಸಮಸ್ತಸಾಮನ್ತಮಕುಟಘಟ್ಟಿತಬಹಲರತ್ನವಿಲಸದಮರಥ
29 ನುಷ್ಕಣ್ಡಮಣ್ಡಿತಚರಣನಖಮಣ್ಡಲಃನಾರಾಯಣಚರಣನಿಹಿತಭಕ್ತಿಃಶೂರ
30 ಪುರುಷಃತುರಗವರವಾರಣಘಟಾಸಂಘಟ್ಟದಾರುಣಸಮರಶಿರಸಿವಿಹಿತಾ
31 ತ್ಮಕೋಪೋಭೀಮಕೋಪಃಯೋಗಂಗಾನ್ವಯನಿರ್ಮ್ಮಲಾಂಬರತಲವ್ಯಾಭಾಸನಪ್ರೋಲ್ಲಸ
32 ನ್ಮಾರ್ತ್ತಣ್ಡೋರಿಭಯಂಕರಸುಭಕರಸನ್ಮಾರ್ಗ್ಗರಕ್ಷಾಕರಃಶೌರಾಜ್ಯಂಸಮುಪೇತ್ಯ
33 ರಾಜಸಮಿತೌರಾಜನ್ಗುಣೈರುನ್ತವೈರಾಜಾಶ್ರೀಪುರುಷಶ್ಚಿರಂವಿಜಯತೇರಾಜನ್ಯಚೂಳಾ[ಮ]ಣಿ
34 ಸತತಪ್ರತಿದಿನಪ್ರವೃತ್ತಮಹಾದಾನಜನಿತಪುಣ್ಯಾಹಘೋಷಮುಖರಿತಮನ್ದಿರೋದರೇಣಶ್ರೀ
35 ಪುರುಷಪ್ರಥಮನಾಮಧೇಯಃತತ್ಪುತ್ರಃಪ್ರತಾಪವಿನಮಿತಸಕಲಮಹೀಪಾಲಮೌ
36 ಲಿಮಾಲಾಲಾಲಿತಚರಣಯುಗಲಃನಿಜಭುಜವಿರಾಜಿತನಿಶಿತಖಡ್ಗಪಟ್ಟಸಮಾ

೨ನೇ ಪತ್ರದ ಹಿಂಭಾಗ.

37 ಕೃಷ್ಟಾನಿಷ್ಟಧರಾಪಾಲವಲ್ಲಭಜಯಶ್ರೀಸಮಾಲಿಂ[ಗಿ]ತಃಸಮರಮುಖಸಮ್ಮುಖಾಗತರಿ
38 ಪುನೃಪತಿಗಜಘಟಾಕುಂಭನಿರ್ಭೇದನೋಚ್ಛಲಿತರಕ್ತಚ್ಛಟಾಪಾತಪಾಟಲಿತನಿಜಭುಜ
39 ಸ್ತಮ್ಭಃಆಕರ್ಣ್ಣಶಮಾಕೃಷ್ಟಚಾಪಚಕ್ರವಿನಿರ್ಮ್ಮುಕ್ತನಾರಾಚಪರಂಪರಾಪಾತಪಾತಿತಾರಾ
40 ತಿಮಣ್ಡಲೋಬಹುಸಮರಸಮಾರ್ಜಿತಜಯಪತಾಕಾಶತಸಭಲಿತನಭಸ್ತಲಃಮದು
41 ಗುಂದೂರ್ನ್ನಾಮಗ್ರಾಮೇಪವಿಷ್ಟರಾಷ್ಟ್ರಕೂಟಚಾಳುಕ್ಯಹೈಹಯಪ್ರಮುಖಪ್ರ
42 ವೀರಸನಾಥವಲ್ಲಭಸೈನ್ಯವಿಜಯವಿಖ್ಯಾತಪ್ರಭಾವಃರಾಷ್ಟ್ರಕೂಟಪಲ್ಲವಾನ್ವಯ
43 ತಿಲಕಾಭ್ಯಂಮೂರ್ದ್ಧಾಭಿಷಿಕ್ತಗೋವಿನ್ದನನ್ದಿವರ್ಮ್ಮಾವಿಧೇಯಾಭ್ಯಾಂಸಮನುಷ್ಠಿತರಾಜ್ಯಾಭಿಷೇ

44ಕಾಭ್ಯಾಂನಿಜಕರಘಟಿತಪಟ್ಟವಿಭೂಷಿತಲಲಾಟಪಟ್ಟೋವಿಖ್ಯಾತಶಿವಮಾಲಗಂಗಾನ್ವ
45ಯನಭಸ್ಥಲಗಭಸ್ತಿಮಾಲೀಕೊಂಗುಣಿಮಹಾರಾಜಾಧಿರಾಜಪರಮೇಶ್ವರಶ್ರೀಶಿವಮಾರದೇವ

೪ನೇ ಪತ್ರದ ಮುಂಭಾಗ.

46ತಸ್ಯಭ್ರಾತಾಸಕಲರಾಜನ್ಯಮಕುಟತಟಘಟಿತಾನೇಕರತ್ನಜಾಲಜಟಿಲೀಕೃತಪ್ರ
47ಭಾವನಿದಕೇನಮರಧನುಃಖಣ್ಡಮಣ್ಡಲೇನೇವಪ್ರದಕ್ಷಿಣೀಕೃತಚರಣಕಮಳಯುಗಳಃ
48ಅನೇಕವಿಕ್ರಮಾಕ್ರಾನ್ತದಿಗ್ವಿಜಯಾರ್ಜ್ಜಿತೋರ್ಜ್ಜಿತಲಕ್ಷ್ಮೀವಿಲಾಸಃರಣತತ್ಪರತಾನುಯಾತನಿರ್ವ್ವರ್ತ್ತಿತ
49ನಿಖಿಲಕೃತ್ಯವಿಜ್ಞಾತವಿವಿಧವಿದ್ಯಾತತ್ವಃಶಕ್ತಿತ್ರಯಸಮ್ಪನ್ನಹಸ್ತಿಯನ್ತ್ರಪ್ರಯೋಗನಿಪುಣ
50ಚತುರಗವಶಕೌಶಲೋಕ್ಷಾಲೋಪರಮಣೀಯಮಧುಮಾಗವಶಲಜಡೇನನ್ದಕರೋಬಿ
51ನಕರಣಃಪಪ್ರತಾಪವಿಸ್ತಾರಿತದಿಗನ್ತರಪಾಯಮಾನವಿಗ್ನದೋರ್ದ್ದಣ್ಡಸ್ವಭುಜಬಲ
52ಪರಾಕ್ರಮಾವಧೀರಿತಸಕಲಾಧೀಸ್ವರಃಧೈರ್ಯ್ಯವೀರ್ಯ್ಯಶೌರ್ಯ್ಯಪರಿಪೂರ್ಣ್ಣಜಲಧಿರಿವ
53ಸರ್ವ್ವಶತ್ವಾಶ್ರಯಃನಿರ್ಮ್ಮಲಶ್ಚಪ್ರತಿಪಶ್ಚನ್ದ್ರಇವಸಕಲಲೋಕನಮಸ್ಕೃಯಮಾಣಮೂರ್ತ್ತಿಃಕ
54ಲಾವಾಂಶ್ಚಮೇರುರಿವಸುಮಹಿಮಾಧಃಕೃತಮಹಾಮಹೀಭಿರ್ಮ್ಮಣ್ಡಲೋಧರಣೀಧರಶ್ಚ ಅತಿಚ
55ತುರಯುವತಿಜನನಯನಕುಮುದವನವಿಕಸನವ್ಯಸನಕನಿಷ್ಠಚಿನ್ತಾಮಣೇರಸಮಸ್ತ

೪ನೇ ಪತ್ರದ ಹಿಂಭಾಗ.

56ಭಾವಃಸಕಲಪುರುಷಾರ್ತ್ಥಸಿದ್ಧಿಸಾಧನೋಬಾಯನಿರವದ್ಯವಿನ್ಯಾಪ್ರಭಾವಶಕ್ತಿಸಮ್ಪ
57ದ್ವಿದ್ವಾಭಿಮಾನಪ್ರಸರಶ್ರೀವಿಜಯಾದಿತ್ಯನಾಮಾನೃಪತಿಃತಸ್ಮಾದಭೂಃರತಿರತ್ನಾತಮೋಲಿ
58ರತ್ನಾಂಸುಜಾಲಜಟಿಲೀಕೃತಪಾದಪದ್ಮಃಪ್ರಖ್ಯಾತಕೀರ್ತ್ತಿಪರರಾಜಿತಭೂರಿಮಾಲಾಲಕ್ಷ್ಮ್ಯಾ
59ಸಮಾಶ್ರಿತವಿಶಾಲತರೋರವಕ್ಷಃಜೇತಾಸತ್ರುಮಿತೀಶನ್ನರಪತಿರಿವಪ್ರಾಪ್ತಲಕ್ಷ್ಮೀವಿಲಾ
60ಶಃತ್ರತಃನೀತಿಕ್ರಮೇಣನಿಖಿಲಸಕಲಭುವನಸರ್ವ್ವಶಾಸ್ತ್ರಾರ್ತ್ಥತತ್ವದಾತಾವಿದ್ವಜ್ಜನಾ
61ನಾಂಧನಮಾನವರತಂಶಕ್ತಿಯುಕ್ತಿಃಪ್ರಜನಾಂಧಾತಾಮನ್ವಾದಿತುಲ್ಯಂನೃಪಜನಮಹಿತೋರಾಜ
62ಮಲ್ಲೋನೃಪೇನ್ದ್ರಃಅವಿತಥಚತುರಪಟುಮಧುರಮೃದುವಿಶದಘಟಿತವಚನಶ್ರೀಲತಾವಿಜ್ರ
63ಮ್ಭಮಾಣಾವಲಂಭನಕಲ್ಪಹಾವವಿವಿಧಸರ್ವ್ವ[ಜ]ನಪರಿವೃತೋಪ್ಯದ್ವಿತೀಯಃಲಗ್ನಾಂಪಾತಾಲಕುಕ್ಷೋ
64ಧರಣಿಮಥಹರಿಪ್ರೋಧೃತಕ್ರೋಡರೂಪಾದ್ವಿಷ್ಟ್ಯತಶ್ರಾಷ್ಟ್ರಕೂಟೈರಪಹೃ[ತ]ಪೃಥುವೀತತ್ಕಾಲೇವೀರ್ಘ
65ಲೀನಾಂಸಿಜ್ಞಾಕಾರೇಗಂಗಾನ್ವಯಕುಲತಿಲಕೋಭೂಮಿಮಾಕೃಷ್ಯತಸೀಮಾಂದೇಪ್ರೋಜಗ್ರಾಹ

೫ನೇ ಪತ್ರದ ಮುಂಭಾಗ.

66ಜಿತ್ವಾಬಲಿರಿಪುಮಥನೋರಾಜಮಲ್ಲೋನೃಪೇನ್ದ್ರಃ ॥ ತತ್ಪುತ್ರಃಸ್ವಸ್ತಿಸತ್ಯಾಶ್ರಯಸ್ತ್ಯಸತ್ಯಸೌಚಾ
67ಚಾರವಿನಯನ[ಯ]ಸಮ್ಪನ್ನವಿಗತಭಯ[ಯ]ಶಪ್ಪತಾಕಾವಭಾಸಕಳಧವನಸ್ವಾಮಿಭಕ್ತಶ್ರೀ
68ಮತ'ರಣವಿಕ್ರಮಯ್ಯಂ । ಅರೀದಗೋತ್ರಂಪರಪದಿಭಟ್ಟಗ್ಗೆಕೊಳನೆಂಲೂರಬ್ರಹ್ಮದೇಯಂಕೊ
69ಟ್ಟಮಸಾಕ್ಷಿಸಂಗಮದಪೆಂರ್ಮ್ಮನಡಿಗಾವುಣ್ಡರುಂರಣವಿಕ್ರಮಗಾವುಣ್ಡರುಂಚೋಟಿಗಾವುಣ್ಡರುಂಮಿರಿ
70ದೆಯಬಮ್ಮಾದಗಾವುಣ್ಡರುಂಏಚೆಯಜ್ಜಗಾವುಣ್ಡರುಂಮುದುಗುಂಡೆಯಾನ್ಸರಗಾವುಣ್ಡರುಂಶ್ರೀ
71ದಾಮಗವುಣ್ಡರುಂಪೆರ್ವ್ವಾಳಲುಂಮಾದಗಾವುಣ್ಡರುಂಪಿಟ್ಟುವಿಗಾವುಣ್ಡರುಂಪೆರ್ವ್ವಯಲಕ್ಕೆ
72ರುಂತೆಸನ್ದಾಕರುಂಕೊಳನೆಲ್ಲೂರಸಾಲತ್ತರುಂಮಾರಡರುಂಎನ್ವೆರುಂನರಸಾಕ್ಷಿಸೀಮಾನ್ತರಮ್
73ಪಡೆಯುಮಿರ್ಪ್ಪತ್ತುಗಣ್ಡುಗಂಮಾಸೆವಾನಿ ॥ ಸೀಮೆಮೂಡಾಯೊಚುಪಿಎತೆಂಕಾಮ್ಭಟಾರನಮಾಡಮ್ಪೇರೋಣಿ
74ಸನ್ದುತೆಸನ್ದಾಕಕೆಟಿಎಪೆಂರ್ಮ್ಮಗನೆಚಿಎಪಡಗಾಯಸನ್ದುಕಿಜಮಾಮಿಪಂಳಪೆನೆಡಿರಕೆಚಿಎಸಾಲತ್ತ
75ಕಾಡೇಚಿನಪೇರೊಟಿಯ್ಯೆಎಪಗನೆಪಂಳಪೆಗೋಸನನೆಕೊಣೆನಗೆಚಿಎಪೆರ್ಮ್ಮುಯತೆಂಕಾಯೊಟಿಯ್ಯೆಎಪಡು

ಌನೇ ಪತ್ರದ ಹಿಂಭಾಗ.

76 ವಾಯ್ವ್ಯಾಽವ್ವೇಲಿಯೆಸನ್ನುಪೆಗ್ಗೊರ್ಗಲ್ಲಿಯುಳ್ಕೂಡಿತ್ತು ಪೆಜ್ಜೋಗೆಯವೊದಲುಳ್ಬಡಗಾಯ್ಪ್ಪೆಗ್ಗೊರ್ಗಲ್ಲಿ
77 ಯೆಸನ್ನು ಕಾವೇರಿಯುಳ್ಕೂಡಿತ್ತು ಸೀವೆ ॥ ಬಹುವಿರ್ವ್ವಸುಧಾಭುಕ್ತಂರಾಜಭಿಶಗರಾಜ
78 ಭಿಯಸ್ಯಯಸ್ಯಯದಾಭೂವಿತಸ್ಯತಸ್ಯತದಾಫಲಂ ॥ ಸ್ವದತ್ತಂಪರದತ್ತಂಬಾಯೋಹರೇಚ
79 ಬಸುನ್ಧರಾಂಷಷ್ಟಿಂಬರಿಷಶಹಸ್ರಾಣಿವಿಷ್ಟಾಯಂಜಾಯತೇಕ್ರಿಮಿ ॥ ಸರ್ವ್ವಾನೇತಾನ್ಭಾವಿನಪಾ
80 ರ್ಥ್ಥಿವೇನ್ದ್ರಂಭೂಯೋಭೂಯೋಯಾಚತೇರಾಮದೇವಸಾವಾನ್ಯೋಯಂಧರ್ಮ್ಮಸೇತುನ್ನೃಪಾಣಾಂಕಾ
81 ಲೇಕಾಲೇಪಾಲನೀಯಃಕ್ರಮೇಣಃ ॥ ಕರ್ಪ್ಪೂರಕುಲನ್ಮಾರಿಕೇಸಿಲಿಖಿತಂತೋಟವಮುಮ್ಮಣ್ಣು
82 ಮುಪಟಿಯೆಯುಬಿಟ್ಟಿನ್ತೆಪರಿಯಾರವಿಟ್ಟವು ॥

61

ಅದೇ ಹೋಬಳಿ ನೆರಳೂರುಪುರದ ಗ್ರಾಮಕ್ಕೆ ನೈಋತ್ಯ ಹೊಲದಲ್ಲಿರುವ ಕಲ್ಲಿನಲ್ಲಿ.

ಪ್ರಮಾಣ 4′ 6″ × 2′ 6″.

1 ಸ್ವಸ್ತಿಶ್ರೀಭುಜಬಳವೀರಗಂಗತ
2 ಳಕಾಡುಗೊಂಡಹೋಶಳದೇವರುಸು
3 ಕವಿನೋದದಿಂರಾಜ್ಯಂಗೆಯುತ್ತಿರೆಸಕ
4 ವರಿಸಸಾಸಿರದ . . .ನೆಯುಪ್ರ
5 ಮಾದಿಸಂವಛರದಮಹಾಪ್ರತಾನದಂ
6 ಡನಾಯಕಭೋಪ್ಪೈಯ್ಯಬಿಳಿವಾಣಿಯ
7 ಮಹಾದೇವರ್ಗೆತೊಱೆನಾಡಳ್ವಮುಂತ
8 ಗಿದ್ದುಕಱೆಕಂಟಜೇಯುಂಗೆಬಿಟ್ಟ
9 . ಮಿಮರಸಿಂಗನಹಳ್ಳಿಯಅಡುವಿ
10 ಗೆಮಣ್ಣುಽರಪಳಮಣಸೆಯಿಂದಮೂ
11 ಡಲನಟ್ಟಕಲಿಂದತೆಂಕೆಱೆಆದಿಯಾ
12 ಗಿದೇವದಾನಇದಅಳಿಹಿದವಂಗಂ
13 ಗೆಯಬಾಣರಸಿಯತ[ಡಿ]ಯುಸಸಿರಕ
14 ವಿಲೆಯಸಸಿರಬ್ರಹ್ಮಣರಕೊಂದ
15 ಬ್ರಹ್ಮತಿಗೆಹೋದ । ನಾಯವಿಷ್ಟಿ
16 ಯತಿಂದ

HEGGAḌADÊVANKÔṬE TALUQ.

ಹೆಗ್ಗಡದೇವನಕೋಟೆ ತಾಲೂಕು.

1

ಸರಗೂರು ಹೋಬಳಿ ಸರಗೂರು ಗ್ರಾಮಕ್ಕೆ ದಕ್ಷಿಣ ಪಂಚಬಸ್ತಿ ಕಲ್ಲಿನಲ್ಲಿ.

ಪ್ರಮಾಣ 5′ 6″ × 1′ 6″.

1 ಶ್ರೀಮತ್ಪರಮಗಂಭೀರಸ್ಯಾದ್ವಾ
2 ದಾಮೋಘಲಾಂಛನಂಜೀಯಾತ್ರೈಲೋಕ್ಯನಾಥ
3 ಸ್ಯಶಾಸನಂಜಿನಶಾಸನಂ ॥ ಸ್ವಸ್ತಿ ಶಕವರುಷ ೧೨
4 ೮೬ನೆಯಶೋಭಕೃತುಸಂವತ್ಸರದವಯಿಶಾಖಶು
5 ೧೨ ಗು । ಪ್ರಚಂಡದೋರ್ದಂಡಮಂಡಲೀಮಂಡನಮಂಡ
6 ಲಾಗ್ರಖಂಡಿತಾರಾತಿಪ್ರಕಾಂಡಮಹಾಮಂಡಳೇಶ್ವರ
7 ಸಮುದ್ರಾಯಾಧೀಶ್ವರಶ್ರೀಮತುವಿಜಯಬುಕ್ಕರಾಯರಾ
8 ಜ್ಯಾಭ್ಯುದಯೇಶ್ರೀಮದ್ಭಗವದರ್ಹತ್ಪರಮೇಶ್ವರಶ್ರೀಪಾದ
9 ಪದ್ಮಾರಾಧಕರಪ್ಪಶ್ರೀಮನ್ಮಹಾಪ್ರಧಾನಬಯಿಚಯದಂ
10 ಡನಾಥರಪಾದಪದ್ಮೋಪಜೀವಿಹೊಯಿಸಳರಾಜ್ಯಾಧಿಪ
11 ತಿನಾಗಂಣ್ಣಒಡೆಯರಮ . ಯಿಂಮಿತೂರ್ವ್ವತಿ .
12 ತಾಪಹಾರಮಾ . ರುಂದಲೆಗಣಾಗ್ರಗಂಣ್ಯ
13 ರಪ್ಪಶ್ರೀಮತ್ಪಂಡಿತದೇವಯಿವರಶಿಷ್ಯರುಬಯಿ
14 ನಾಡಮಹಾಪ್ರಭುಮಸಣಯಹಳಿಯಕಂಪ
15 ಣಗವುಡರುತಮಗೆಸ್ವರ್ಗಾಪವರ್ಗನಿಮಿತ್ತವಾಗಿ
16 ಏಳಗುಳದಶ್ರೀಗುಂಮಟನಾಥಸ್ವಾಮಿಗಳಅಂ
17 ಗರಂಗಭೋಗಸಂರಕ್ಷಣಾರ್ಥವಾಗಿತಂಮಬಯ
18 ನಾಡೊಳಗಣತೋಟಹಳಿಯಗ್ರಾಮ ೧ ಆಚತುಃ
19 ಸೀಮೆಯೊಳಗಣಕೆರೆಗದ್ದೆಬೆದ್ದಲುತೋಟತುಡಿ
20 ಕೆಕುಳಹೊಂಬಳಿಆಯಹೊಂನು . ಉಪೊಂನು
21 ಹಂದಲುಮಿಕ್ಕಹೊತಿಮಾದಾಚಿತೆರೆಸುಂಕನಿಧಿ
22 ನಿಕ್ಷೇಪಜಲಪಾಷಾಣಮುಂತಾದಸಕಲಸ್ವಾಂಮ್ಯದಕುಳ
23 ವನುರಾಯರುದಂಣಾಯಕರ . . ಯಲಿನಾಗಂಣಬು
24 ಡೆಯರಕಯಿಂದಪ್ರಬಿಡಿಸಿಶ್ರೀಗುಂಮಟನಾಥಸ್ವಾಮಿ
25 ಗಳಿಗೆಆಚಂದ್ರಾರ್ಕ್ಕಸಲುವಂತಾಗಿಗುಂಮಟಪುರ
26 ವೆಂದುಕೊಟ್ಟದಾನಶಾಸನ ॥ ಸ್ವದತ್ತಾಂಪರದತ್ತಾಂ
27 ವಾಯೋಹರೇತವಸುಂಧರಾಂ । ಷಷ್ಟಿಂವರ್ಷಸ
28 ಹಸ್ರಾಣಿವಿಷ್ಟಾಯಾಂಜಾಯತೇಕ್ರಿಮಿಃ ॥ ಅಕ್ಷ
29 ಯಸುಖಮಿಾಧರ್ಮ್ಮಮನೀಕ್ಷಿಸಿರಕ್ಷಿಸುವಪುಂ
30 ಣ್ಯಪುರುಷರ್ಗಕ್ಕುಂ । ಭಕ್ಷಿಯಿಪಾತನಸಂತಾನ
31 ಕ್ಷಯಮಾಯುಕ್ಷಯಂಕುಲಕ್ಷಯಮಕ್ಕುಂ ॥
32 ದಾನಪಾಲನಯೋರ್ಮ್ಮಧ್ಯೇದಾನಾತ್ಶ್ರೇಯೋನುಪಾ
33 ಲನಂ । ದಾನಾತ್ಸ್ವರ್ಗ್ಗಮವಾಪ್ನೋತಿಪಾಲನಾದಚ್ಯುತಂ
34 ಪದಂ । ಸಾಮಾನ್ಯೋಯಂಧರ್ಮ್ಮಸೇತುರ್ನ್ನಪಾಣಾಂ
35 ಕಾಲೇಕಾಲೇಪಾಲನೀಯೋಭವದ್ಭಿಃ । ಇಥಂಭೂತಾಂಭಾ
36 ವಿನಃಪಾರ್ಥಿವೇಂದ್ರಾನ್ಭೂಯೋಭೂಯೋಯಾಚತೇರಾ
37 ಮಚಂದ್ರಃ ॥

2

ಅದೇ ಗ್ರಾಮದಲ್ಲಿ ಕಾಳಮಂಟೇಶ್ವರಗುಡಿಯ ದಕ್ಷಿಣಕಡೆ ಗೋಡೆಗೆ ಸೇರಿದ ಕಲ್ಲಿನಲ್ಲಿ.

ಪ್ರಮಾಣ 3′ 5″ × 2′ 8″.

1 ಶಕವರಷ ೧೩೩೮ ಸಂದ
2 ದುರ್ಮ್ಮುಖಿಸಂವತ್ಸರದಕಾರ್ತ್ತಿಕಶು . .
3 ೧ಲು ಯಿಂದವರದಲುಶ್ರೀಮ . .
4 ಸಜಿಮನಾಯಕರು . . . .
5 . . . . ರಿಗೆಸಿರಗುಗಾವುಡಗೆಗ ೩೦
6 . . . . ಸೋಮಯಗುಕಣಿಗೆಲ
7 . . . . ಕೋಟೆಗುಯಿಕಾಸಿಯ
8 . . . . ವರು . . . .
9 . . . . ಮಲ್ಲಿಗೊಉಡ . . . .
10 . . . . ಪಲುಟು . . . .
11 . . . . ಆಚಂದ್ರಾ . . . .

(ಮುಂದೆ ಕಲ್ಲು ಹೋಗಿಧೆ)

3

ಅದೇ ಗ್ರಾಮದಲ್ಲಿ ನರಸಿಂಹದೇವಸ್ಥಾನದ ರಂಗಮಂಟಪದ ಉತ್ತರಕಡೆ ಕಂಬದ ಮೇಲೆ.

[1]ಯಿರಗಲದೇ
[2]ವಣಿಗಲಡನ
[3]ಮಗಮಣಿಗಲು
[4]ಜಕಟಿಸಿದಾಬಾಗ
[5]ಲಅಂಕಣ

4

ಅದೇ ಗ್ರಾಮದಲ್ಲಿ ರಾಮಭಟ್ಟರ ವಶದಲ್ಲಿದ್ದ ತಾಮ್ರ ಶಾಸನ.

ಪ್ರಾರ್ವದ ಹಳಗನ್ನಡಕ್ಷರ—೫ಪತ್ರಗಳು—ಆನೆಮುದ್ರೆ.

೧ನೇ ಪತ್ರದ ಹಿಂಭಾಗ.

[1]ಸ್ವಸ್ತಿಕೊಙ್ಗಣಿವರ್ಮ್ಮಧರ್ಮ್ಮಮಹಾರಾಜಾಧಿರಾಜಾಪರಮೇ
[2]ಶ್ವರಶ್ರೀಮತ್‌ಶ್ರೀಪುರುಷಮಹಾರಾಜರ್ಪೃಥುವೀರಾಜ್ಯಂಗೆ
[3]ಯೆಕೆಸುಗೊಳವೊಡೆಯಬಿನಾಮ್ಮಜ್ಗೆಧಣ್ಣಗವಾಡಿಯಂ
[4]ಬ್ರಹ್ಮದೇಯಂಗೊಟ್ಟರ್ಶ್ರೀಪುರುಷಮಹಾರಾಜರ್ಭಟಾರರ
[5]ಶ್ರೀನಕ್ಷತ್ರದೊಳ್ಪನ್ನಿರ್ವ್ವರ್ಪೂರ್ವ್ವರುಣ್ಕೋಟಿಂಗಳ್ಗೆಏಕಭೋ
ಗಂಮಿದಱಾ

೨ನೇ ಪತ್ರದ ಮುಂಭಾಗ.

[6]ಪಡೆಯಂ । ವರ್ಷಕ್ಕೆ ಪತ್ತುಗದ್ಯಾಣಂತೆಱೆತಸ್ಯಸೀಮೆಮೂಡಾ
[7]ಯ್ಪುರ್ವ್ವಳ್ಳಮೆಪೋಟೆವಾಡಿಯಸೀಮೆಯುಳ್ಕೂಡಿತ್ತುಪ
[8]ಡುವಯ್ಅಳಿವದಿಯ್ಯೆರ್ಬ್ವಳ್ಳಗಾಯ್ನ್ಯೋಡಿನಡದು
[9]ದುಪಟ್ಟ್ಟಪೋಱಗಮೂಡಾಯ್ನೋಡಿನಡದಾಱಿದ್ದಲ್ಗೊ
[10]ಲ್ಲಿಯೆಕಃಧರ್ಮ್ಮಮನಱಿತೊಂವಾರಣಾಸಿಯುಂಸಾ

೨ನೇ ಪತ್ರದ ಹಿಂಭಾಗ.

[11]ಸಿರಂಕವಿಲೆಯುಮಂಸಾಸಿರಂಪಾರ್ವ್ವರುಂಕೊನ್ದಪ
[12]ಞ್ಚಮಹಾಪಾತಕನಪ್ಪುಮ್ತಸ್ಯಪ್ರತಿದಿನ
[13]ಪ್ರವೃತ್ತಮಹಾದಾನಜನಿತಪುಣ್ಯಾಹಮು
[14]ಖರಿತಮನ್ದಿರೋದರೇಣಶ್ರೀಪುರುಷಪ್ರತಮನಾ
[15]ಮಧೇಯೇನಪ್ರಿಥುವೀಕೊಙ್ಗಣಿಮಹಾರಾಜೇನಃ

೩ನೇ ಪತ್ರದ ಮುಂಭಾಗ.

[16]ತಸ್ಯಮಹಾಸಾಮನ್ತಃಮುದುಕೊಙ್ಗಣಿಯದಿಯ
[17]ರಸರ್ಆರಿದಾಳ್ಕೆ ಎಪ್ಪತ್ತುಮೂಂತಭೂಮಿವಿ
[18]ತ್ತಿಯಾಳುತ್ತಮಿಱ್ದುಶ್ರೀಪುರುಷಮಹಾರಾಜರ್ಗ್ಗೆ
[19]ವಿಜ್ಞಾಪನಗೆಯ್ದುಕೆಸುಗೊಳವೊಡೆಯಮಹಾ

೩ನೇ ಪತ್ರದ ಹಿಂಭಾಗ.

[20]ಜನಕ್ಕೆಪೆರ್ವ್ವಟ್ಟಿಯೂರುಂಮದ್ದೂರುಮಂಬ್ರಹ್ಮದೇ
[21]ಯಂಪೊಯ್ದರ್ಅವಜಾಪಡೆಯಂಪೆರ್ವ್ವಟ್ಟಿಯೂ
[22]ರುನ್ದತೆಱೆಪೆನ್ನರ್ನ್ದಿಎರಡುತೆಱುವುದುಮದೂರ್
[23]ರಾತೆಱೆಪನ್ನೆರಡುಪಣಂಪೊನ್ನುಪನ್ನಿರ್ಛಣ್ಣಗಂ

೪ನೇ ಪತ್ರದ ಮುಂಭಾಗ.

[24]ಭತ್ತಮುಂಅಸ್ಯಸೀಮಾನ್ತರಂಪೆರ್ವ್ವಟ್ಟಿಯೂರಸೀಮೆ
[25]ಮೂಡಯ್ತೂಡಿಲಪೆರ್ವ್ವಳ್ಳಮೇತೆಂಕಯ್ಸಗೊಗ್ಗತ್ತಿಗೂ
[26]ಡಿಲಪಳ್ಳಮೇಪಡುವಾಯ್ಪೆಗ್ಗೊರ್ಲ್ಲಿಯೆ
[27]ಬಡಗಾಯ್ಪೆರ್ವ್ವಳ್ಳಮೆಸೀಮೆಮದ್ದೂರಸೀಮೆ

೪ನೇ ಪತ್ರದ ಹಿಂಭಾಗ.

[28]ಮೂಡಾಯ್ಪಟ್ಟನಪೊರೆಯನಬನ್ದತ್ತುಕೊ
[29]ಸಗವೆಟ್ಟನೊಳ್ಕುಡೆಅತ್ತೆತೆಂಕಾಮ್
[30]ಮಣಿಯಾಲಕೊಲ್ಲಿಯಪಳ್ಳಮೆಪಡು
[31]ವಾಯ್ಪೆಗ್ಗೊರ್ಲ್ಲಿಯೆಸೀಮೆ ॥ ಸ್ವದತ್ತಾಂ

೫ನೇ ಪತ್ರದ ಮುಂಭಾಗ.

[32]ಪರದತ್ತಾಂವಾಯೋಹರೇತವಸುನ್ಧರಾಂ ಷಷ್ಟಿವರ್ಷಸಹ
[33]ಸ್ರಾಣಿವಿಷ್ಟಾಯಾಂಜಾಯತೇಕ್ರಿಮಿಃ । ಬಹುಭಿರ್ಬ್ವಸುಧಾ
[34]ಭುಕ್ತಾರಾಜಭಿಸ್ಸಗರಾದಿಭಿಃಯಸ್ಯಯಸ್ಯಯ
[35]ದಾಭೂಮಿತಸ್ಯತಸ್ಯತದಾಫಲಂ ॥ ಕುನ್ತಾಚಾರ್ಯ್ಯಲಿಖಿತಂ ॥

೫ನೇ ಪತ್ರದ ಹಿಂಭಾಗ.

[36]ನನ್ದಿಗುನ್ದಗೆದಾನಂಗೊಟ್ಟದುಕೆಸುಗೊಳದಮೇಲಿ
[37]ನಂಬನ್ನಡುವುಮದೂರರೊಳ್

5

ಅದೇ ಹೋಬಳಿ ಶಂಕಹಳ್ಳಿ ಗ್ರಾಮಕ್ಕೆ ಪೂರ್ವ ಮೂರಬಾಗಿಲ ಬಳಿ ಯಿರುವ ಕಲ್ಲಿನಲ್ಲಿ.

ಪ್ರಮಾಣ 2′9″ × 3′.

1 ಸ್ವಸ್ತಿಶ್ರೀಶಾಲಿವಾಹನಶಕವರ್ಷಂಗಳು
2 ೧೬೪೮ನೇಧಾತುನಾಮಸಂವತ್ಸರದಆಶ್ವೀ
3 ಜಶು ೧ಲು ಶ್ರೀಮದ್ರಾಜಾಧಿರಾಜಮಹಿಶೂರಕೃಷ್ಣರಾ
4 ಜವಡೆಯರವರೂಸಃಮುಖದವೀಣೆವಿದ್ವಾಂಸವೆಂಕಟಸುಬ್ಬೈ
5 ಯನವರಿಗೆಶಂಖಹಳಿಗ್ರಾಮವಂನುಯಿಾದಿವಸದಲ್ಲೂ
6 ಸಹಿರಂಣ್ಯೋದಕದಾನಧಾರಾಪೂರ್ವಕಶ್ರೀಕೃಷ್ಣಾರ್ಪಣವಾಗಿ
7 ಧಾರೆಯನೆರೆದುಕೊಟ್ಟುಯಿರುವದಾರಿಂದಾನೀಉನಿಂಮಪು
8 ತ್ರಪೌತ್ರಪಾರಂಪರ್‍ಯವಾಗಿಆಚಂದ್ರಾರ್ಕವಾಗಿಅನು
9 ಭವಿಸಿಕೊಂಡುಬರುವದುಯೆಂದುಬರೆಕೊಟ್ಟಸರ್ವ
10 ಮಾಂನ್ಯಶ್ಯಾಸನಾ

6

ಅದೇ ಹೋಬಳಿ ಮಲಿಯೂರು ದುಗ್ಗಲೀ ದೇವಸ್ಥಾನದ ಹಿಂದೆ ನೆಟ್ಟ ಕಲ್ಲಿನಲ್ಲಿ.

ಪ್ರಮಾಣ 4′ 6″ × 4′ 6″.

1 ಸ್ವಸ್ತಿಶ್ರೀಸಕವರುಷ ೧೪೭೫ನೆಯಂರಕ್ತಾಕ್ಷಿಸಂ
2 ವತ್ಸರದಭಾದ್ರಪದಶು ೫ಲು ಶ್ರೀಮನುಮಹಾಚೇರಚೋ
3 ಳಪಾಂಡ್ಯಮೂವರುರಾಯರಗಂಡನೀಲಗಿರಿನಾಡಾಳ್ವ
4 ದೇವರಾಜವೊಡೆಯರುಮಳೆಯೂರ ಗ ೪೦ ಹೊಂನಿನಲಿ
5 ನೀರಾಜಯದುಪಕ್ಕೆಗ ೧೫ ಕುಳವಬಿಟ್ಟಾಸಲ್ಲು . . ೧೫
6 . ಒಡೆಯರು . . . . ಪೂಜೆಯಮಾಡಿದೇವಿಯ
7 . . . . ಕೊಂಡುಯಿಹರುಯಿ . . . .
8 . . . . ಬರದಬರಹ

7

ಅದೇ ದೇವಸ್ಥಾನದ ಬಳಿ ೧ನೇ ಕಲ್ಲಿನಲ್ಲಿ.

ಪ್ರಮಾಣ 3′6″ × 3′

1 . . . ಗಂಗೆಯುಂಕಡಾರವಂಚೋಲದೇಸ
2 ಮುಂಗೊಣ್ಡಕೋಪರಕೇಸರಿಬ್ರಹ್ಮರಾ . ಶ್ರೀ
3 ರಾಜೇನ್ದ್ರಚೋಳದೇವಗ್ಗ್‍ಯಾಣ್ಡಯಿಪ್ಪದುಳಜ
4 . . . . . . ಣ್ಡಭದ್ರಿತೆಕನಾಭ್ಯ
5 . . . . ನುರಬಳನಾ . ವಕೆ . . ಕಚ
6 ಗಂಭೀರಪಟ್ಟ . . ವರ್ಗ . . ಅಯ್ಯನ
. . . .
12 . . . . ಕೆಜಿಯುಕವಿಳೆಯವಾರಣಾಸಿಯನಟಿದ
13 . . . . . .

8

ಅದೇ ದೇವಸ್ಥಾನದ ಬಳಿ ೨ನೇ ಕಲ್ಲಿನಲ್ಲಿ.

ಪ್ರಮಾಣ 6′ × 4′ 6″.

1 ಸ್ವಸ್ತಿಶ್ರೀಮನುಮಹಾಸಮಸ್ತಭುವನಾಸ್ರಯಪ್ರಿಥಿವೀವಲ್ಲಭ
2 ಮಹಾರಾಜಾಧಿರಾಜಯಾದವಕುಲಾಂಬರದ್ಯುಮಣಿಸರ್ಬ್ಬಜ್ಞ
3 ಚೂಡಾಮಣಿಮಲೆರಾಜರಾಜಮಲೆಪರೊಳುಗಂಡಗಂಡಭೇರುಂ
4 ಡಕದನಪ್ರಚಂಡಏಕಾಂಗವೀರನಸಹಾಯಸೂರಸನಿವಾರಸಿದ್ಧಿ
5 ಗಿರಿದುಗ್ಗ್ರಮಲ್ಲಚಲದಂಕರಾಮಚೋಳರಾಜ್ಯಪ್ರತಿಷ್ಠಾಚಾ ರ್‍ಯ್ಯ
6 ಪಾಂಡ್ಯರಾಜ್ಯಂಮಣಲವಾಡೆದೆಶಾಪಟ್ಟನಪ್ರ್ರಿಥಿಮಲ್ಲಶ್ರೀ
7 ವೀರನಾರಸಿಂಹದೇವರಸರುಪ್ರಿಥ್ವೀರಾಜ್ಯಂಗೆಯ್ವುತ್ತಿರೆಸಕ
8 ವರಿಷಂ ೧೧೯೮ ಈಶ್ವರಸಂವತ್ಸರದಜೇಷ್ಠಸು ೧೫ ಸೋಮಗ್ರ
9 ಹಣದಲ್ಲಿಸ್ವಸ್ತಿಶ್ರೀನೀಲಗಿರಿಸಾದಾಂಪುರವರಾಧಿತ್ಯಕಾ
10 ರಾಧಿರಾಜಮಜುವೊಕ್ಕರಕಾವಸರಣಾಗತವಜ್ರಪಂಜರರುಂ
11 ಶ್ರೀಸೋಮನಾಥದೇವರದಿವ್ಯಶ್ರೀಪಾದಪದುಮಾರಾಧಕರುಮ
12 ಪ್ಪಕಣೆಯಲತುಜುಗುತ್ತಗರಮಾಚಿದೇವಬೊಪ್ಪದೇವನಸುಪು
13 ತ್ರಂಸೋವಿದೇವನುಂಮಾಚಿದೇವನುಂಪ್ರಿಥ್ವೀರಾಜ್ಯಂಗೆಯ್ವು
14 . . ಪ . . . . ಮಮಾ . . ಶ್ರೀಮದಭಿ ॥ ಸರಗೂರಅಗ್ನಿಹೋತ್ರ ಜಾಪಂ
15 ಗುಣಸಂಪನ್ನರುವ

(ಮುಂದೆ ಬರವಣಿಗೆಇಲ್ಲ)

9

ಅದೇ ದೇವಸ್ಥಾನದ ಬಳಿ ಬಿದ್ದಿರುವ ದಾರವಂದದ ಕಲ್ಲಿನ ಮೇಲೆ.

ಹಳಗನ್ನಡಕ್ಷರ.

[1]ಸ್ವಸ್ತಿಶ್ರೀಅಯ್ಯಪಯ್ಯನಹೆಗ್ಗಡೆನಾಗನ್ಮನ | [2]ಮಾಡಿಸಿದಮದಿಲುದಾರವನ್ನಮಾಡಿದಚನ್ನಯ್ಯ

10

ಅದೇ ಹೋಬಳಿ ಬೆಳತೂರು ಗ್ರಾಮದ ಮಲ್ಲೇಶ್ವರಗುಡಿಯ ವಳಗೆ ನೆಟ್ಟ ಕಲ್ಲಿನಲ್ಲಿ.

ಪ್ರಮಾಣ 2′ 6″ × 2′ 10″.

[1]ಸ್ವಸ್ತಿಶ್ರೀಮತುಪ್ರದಾ[ಪ]ಚಕ್ರವರ್ತ್ತಿವೀರಸೋಮೇಶ್ವರದೇವರುಕಣ್ಣನೂರೊಳ
[2]ಗೆಪ್ರಿಥಿ[ವೀ]ರಾಜ್ಯಂಗೆಯ್ಯುತ್ತಿರಲುಶ್ರೀಮನ್ಮಹಾಪ್ರಧಾನಂಸರ್ವ್ವಾಧಿಕಾರಿರಹುತರಾ
[3]ಯಅಲಳದೇವದಣ್ನಾಯಕರಅತಿಕರದಲುಸಕ[ವ]ರುಷಸಾಸಿರದ
[4]ನೂಜಿಯೆಪ್ಪತ್ತೆಂಟನೆಯರಾಕ್ಷಸಂವತ್ಸರದಆಸಾಡಸುದ್ಧಚತುದ್ದಿಸಿಆದಿವಾ
[5]ರಮುಲನಕ್ಷತ್ರಅಮ್ರಿತಯೋಗದಂದುಶ್ರೀಮತುನೀಲಗಿರಿಸಾದಾರಕಣೆಯ
[6]ಲಚಿಕಮಚಿದೇವಾಗೋಪಂಣರಗಂಣಮೂವರುನಯಕರುಸ್ತಿರರಜ್ಯಂಗೆಯ್ಯುತ್ತಿರಲು
[7]ನುಗುನಾಡಜಳತೂರಸ್ಥಾನಾಪತಿಏಕೋತ್ತೀಟಪಂಡಿತರುಮಪ್ಪಚಿಕೊಡೆಯಸು
[8]ಪುತ್ರಮಾರಾಡಮಲ್ಲೊಡೆಯುಂತಮಯ್ಯಮಾಡಿದದೇವಲಿಯಕ್ಕೆಇಕಿದಹೊ
[9]ನಿಗೆಹುದುವಾಳಿಕೆಯಅವರುತೊಡಕಿಡೆದೇವಲಿಕಿತಮ್ಮಕಯ್ಯಂದವುಇ
[10]ಪ್ಪತ್ತನಿಕ್ಕಿನುಗುನಾಡಜಟಹಳಿಯುಮಚಿದೇವನಮಗರಮದೇವಜಳತೂರಚೋಳದೇ
[11]ವನಮಗಹೊಯ್ಸದೇವಎಡವಮಚಿದೇವನನುಗಪದದೇವಮೂವರಕಯ್ಯಇ
[12]ಬಪ್ಪಸಹಿತವಗಿಯಾರತೊಡಕಾತೋಟಇಲದಂತಾಗಿಸಮುಬಗಮಾಡಿಕೊಡುವು
[13]ಲ್ಲಿಕಾರ್ಜ್ಜುನಬಾಣೇಸ್ವರದೇವರುಕಾತನಹಳ್ಳಿಯಬಳಗಗಿಸಂದುದುತಮಯ್ಯಚಿ
[14]ಕಡೆತಂಮಣ್ಣಹರುವಾಡೆಗಜಳತುರಮಲಿಕಾರ್ಜ್ಜುನದೇವಲಯದಷಸನ
[15]ಹೊಯ್ಸಿನಿಲಿಸಿದಸನನಕಲುಮಂಗಳಮಹಾ ಶ್ರೀ ಶ್ರೀ ಶ್ರೀ ಮಾದಯ್ಯನ
[16]ಬಲುಮಾಸಿಸಕಟುರಎಚಹರಿಡಮಗಬಿರುದಮುಂತಾಗಿಚಳಕನಿನೆಇಸಿ
[17]ಮಡಿನಿಲಿಸಿದಸಸನಗಲುಚಿಕೊಡೆಮಕ್ಕಳಕಯಲುದೇವಾಲಿಕೆಹಗಮನಬತ
[18]ವಂಕೊಡವರಲಿಇಕಲಕುಲಿಯಕೊಡುಸಾಸನಗಲಾಗಿಹೊ . . ದದಾಟಜನಮಗವಾಸಣೋ
[19]ಜಮುವತ್ತುಹೊನೊಳಗೆಸಬುವಡೆಯಸಾಕ್ಷಿಯತೆತಹೊನುಹತ್ತು ॥ ಮಸಣೋಜ
[20]ಚಿಕೊಡಿಯಮರಡೆಯತಳಕತ್ತಿದ್ದಿಸಸಿನಮಾಡಿದರಿಗೆಸಕ್ಷಿ ಅರಿದವಾಳೆಕೆಯ
[21]ಕೇತನಹಳಿಯಬಿಮಗಲುಡನಮಗಕೇತಗಲುಡಬೆಟ್ಟಹಳ್ಳಿಯಮಚಿದೇವಾನಮಗರಾಮ·
[22]ದೇವಚೋಳದೇವನಮಗಹೊಸಿದೇವಎಡಮಚಿದೇವನಮಗಪಂಜಿದೇವಗೋಪಣ್ಣನಸೇನಬೋವ
[23]ಮದಯ್ಯಮದಯನಾಯಕನಮನಿಸಿಆಸಗರಬರುದ

11

ಅದೇ ಗುಡಿ ಗೋಡೆಯಲ್ಲಿ ಸೇರಿಸಿಕಟ್ಟಿದ ತುಂಡು ಕಲ್ಲುಗಳಲ್ಲಿ.

ಹಳಗನ್ನಡಕ್ಷರ.

[1]ಸ್ವಸ್ತಿಶ್ರೀಇರುವಿ . . . . . .
[2] . . . . .ಗೆದ . . . .
[3]ನ್ದು . . . .
[4]ನಾಲ್ಗಣ್ಡುಗನೀ . . . . . .

[5]ಣ್ನಿ ಅನಿತು . . . .
[6] . . ಣ್ಣಿಂಪರಿ . . . .
[7]ವನ್ರೊಕ್ಷಿಗಾ . . . .
[8]ಗೆಪ್ಪಣ್ . . . .

12

ಅದೇ ಗ್ರಾಮದ ನರಸಿಂಹದೇವಸ್ಥಾನದಲ್ಲಿರುವ ಕಲ್ಲು ತುಂಡಿನಲ್ಲಿ.

ಪ್ರಮಾಣ 1′ 4″ × 1′ 6″.

1 . . ವಮ್ಮ . . . .
2 ಜ್ಗವೆಮಾಡಿಗಾವುಣ್ಡ
3 ಲೆ . . . . . . ಆತನೊಳ್ಕಾದಿ
4 ತಾ . . . . ಲಕಱೆಮಱೆಯಿಲ್ಲ
5 ಮ . . . . . . ಮ್ಮಱೆವುಗಲೆನ್ದು ಬನ್ದ
6 ಜ್ಗಳೊ . . . . ದಾನ್ತವನ್ದಿರುವನಲ್ಲಿಂ
7 ಯಂ . . . . ಪೊಗೞೆತಿೞ್ದಿಪರಿನ .
8 . ವನಸೇನಪೋವನಾಗಿಯುಮುಯ್ಯಂಬರೆ . . .
9 . . . . ಬುಗಾವುಣ್ಡ ॥ ಮಂಗ . . .

13

ಅದೇ ಗ್ರಾಮದ ಕಾಳಮ್ಮನಗುಡಿಯ ತೊಲೆ ಕಲ್ಲಿನಲ್ಲಿ.

1 ಸ್ವಸ್ತಿಶ್ರೀನುಗುನಾಡ
2 ಪೆಳತೂರಕೊಡಗೆಯ
3 ಸಿಲುಕುನ್ನದತುಱುಂಗೊಳ
4 ಬೆಳತೂರಪುಯ್ಯಲೆಯ್ದಿ
5 ಕಾವರಬೀವಮಾಲೆಜೇಯ .
6 ಮಗನುಕಾದಿತುಱುವಮ
7 ಗುಳ್ದಿತನಯುನಕಳಿ . ಕೊಂಡಂ
8 ಬನಿಕ್ಕಿಚೌಣ್ಡಂವೀರಸಗ್ಗತನಾದ

14

ಅದೇ ಗ್ರಾಮದ ಬಾಣೇಶ್ವರಗುಡಿಯ ಬಳಿ ನೆಟ್ಟ ೧ನೇ ಕಲ್ಲಿನಲ್ಲಿ.

ಪ್ರಮಾಣ 3′ 9″ × 1′ 9″.

1 ಸ್ವಸ್ತಿಶ್ರೀವೀರಬಲ್ಲಾಳದೇ[ವ]ನಮಗವೀರನ[ರ]ಸಿಂಗದೇವಪ್ರಿತುವೀರಜ್ಯಂಗೆ
2 ತ್ತಇರಲುಪ್ರಮಾದಿಸಂವತ್ಸರದಲುಸ್ವಸ್ತಿಶ್ರೀನುಗುನಾಡಮಹಪ್ರ
3 ಭುಇಮ್ಮಡಿದೇವವತರಾಯನಮಗಮಾಚಿದೇವಕೂಲಯದ
4 ಉತ್ತಿಜೀಯಅಡೆಹಳ್ಳಿಯಅಂಕಿಜಯನಮಗಮಾಜಿದೇವದುಬ್ಬಣ
5 ನಹಳ್ಳಿಯಪೋಕಿಜೀಯಚಕ್ಕುರಪಮಳಿಜೀಯ
6 ನುಗುನಾಡಮಹಪ್ರಭುಗಳುಡುದೇವಾಲ್ಯವಹಿಗಿಯಿಸಿದರು
7 ಹುದುವಾಳಿಕೆಯತಮ್ಮಡಿಗಳೆಲ್ಲಗಳುಡುಮೊಚ್ಚಇಕ್ಕುಟುಬಿಡಿದರು
8 ಪೆಳತೂರಮಾದವಾಡೆನುಗುನಾಡಗಳುಡುಗಳುಪಳಿಮರುವ
9 ಚ್ಚಲುಮಾದವಾಡೆಬುಬ್ಬನೆಮಾಡಿಸಿದದೇವಾಲ್ಯಂಱಕಿದಹೊಂನ್ನಗದ್ಯಾ
10 ನ ೬೦ ಕಲುಕುಟಿಗರಕೂಡಬತ್ತಸ ೪೦ ಎ ೨೦ ॥
11 ಪಲವಾಂಗಸಂವತರದಲುಮಾದವಡೆಯಮಕ್ಕಳುಬಂಕಾಡೆ
12 ಇಂದದೇಚಕಾಡೆಇಂತೀಮುವರುಂಬಾಣೇಸ್ವರದೇವರಸೋತೆಗೆಇ
13 ದೇಹೊಂನುಗ ೧೨॥ ಪೆಳಕಲವೆಯರುವಾರಕುಱಟ್ಟಗೆಮರಪೆಸ
14 ಸುಣ್ಣಕೆಲುಗ ೧೭॥ ಇನುಬಡೆಯಅವಹುದುವಾಳಿಯತಮಡಿ
15 ಗಳುತೆಥುಹುಗುವರು ॥ ನಾರಣದೇವರುಹಲಕೆತೆನದಿವಿನಾಯ
16 ಕಕ್ಕಳಿಯವೆಇಅದುದೇವರಗುಂಗದ್ಯಾಣ ೪॥ ಸದತ್ವಂಪರದತ್ವಂ

[17]ಬಹಿರೇಚಕಸುಂರಿಸಷ್ಠ್ವರು । ವರಿಸಸಹಸ್ರಣಡಿಷ್ಠ್ಯೊಯತೇಕ್ರಿಮಿ ॥
[18]ಇದಮುವಮುಡಿದಕಡಳಕೆಜಿಯಕಾವೆಯುಬಾಬೋಜನಮುಗ
[19]ದಟುಜನಮುಗಮುಸಣಯು ॥ ತರಣಸಂವಚ್ಚರದದೀಪ . ಗೆಹೆಟಿಯು
[20]ರಿವಡೆಯುಮುಗನರಣಡೆಅವನಬಗ
[21]ದಲಿಗೊಂಡಂತಹಕವಿಲಿಕಪ್ಪದೆತೇದುಬಂ
[22]ದಳಿಯರುಬಾಳನೀರಂಕುಡಿದರುಸಕಿ
[23]ರೇಬಯುಲಬೀಚಿಗೌಡನಮುಗದರೆಚಲ
[24]ದೇವನಮುಗಮುದೆರ್ಮರೆಹಳಿಯತತಮು
[25]ಗಯಿಲಬಟ್ಟಹಳಿಯಿಾರಮುದೇವ. ಳತೂ
[26]ರಹೊಸಕುಲಯುದರಮುದೇವಚಕುತ
[27]ತಮುಡಿಜೇಯು ಇಂತಿವರುಬಸದುನಡೆ
[28]ಗೊಡು . . ಡೆಕವಿಲೆ . . . . ದತತೆಜುಸಿದ
[29]ರು

15

ಅದೇ ಗುಡಿಯ ಬಳಿ ೭ನೇ ಕಲ್ಲಿನ ತುಂಡಿನಲ್ಲಿ.

ಪ್ರಮಾಣ 2′ × 1′ 3″.

[1]ಸ್ವಸ್ತಿಶ್ರೀಸಕವರಿಷ ೧೨೧೫
[2]ವಿಜೆಯುಸಂವತ್ಸರದಆ
[3]ಸಾಡಸು ೫ ಬು । ಶ್ರೀಮತುಪ್ರ
[4]ತಾಪಚಕ್ರವರ್ತಿಹೊಯಿ
[5]ಸಳಶ್ರೀವೀ . . . . . . ದೇವರಸ
[6]ರುಪ್ರಿಥುವೀರಾ . . . .
[7] . . . . ಶ್ರೀಮತು . . . . . . ದೇವ . .
[8]ಪ್ರಭುಬೆಳತೂರ . . ಮು . . . . . .

16

ಅದೇ ಸ್ಥಳದಲ್ಲಿ ೩ನೇ ಕಲ್ಲು.

ಪೂರ್ವದ ಹಳಗನ್ನಡಕ್ಷರ.—ಪ್ರಮಾಣ 5′ × 3′ 8″.

[1]ಶ್ರೀಸ್ವಸ್ತಿಸಕವರಿಷವೊಂಭಯ್ನೂಱನಾಲ್ವತ್ತಮೂಱನೆಯರೌದ್ರಿಸಂವತ್ಸರದಆ
[2]ಷಾಡಮಾಸದಪುಣ್ಣಮೆಉತ್ತರಾಷಾಡನಕ್ಷತ್ರಂಮುಕ
[3]ರಚನ್ದ್ರಂಬ್ರಿಹಸ್ಪತಿವಾರಂಶ್ರೀಮುಡಿಗೊಣ್ಡರಾಜೇನ್ದ್ರಚೋೞರಾಜ್ಯಂಗೆ
[4]ಯ್ಯುತ್ತಿರೆಇಯಾಣ್ಡು ಬಂಭತ್ತಾ ವುದಜಳನುಗುನಾಡಬಱಯಬೆಳತೂರಬಡೆದುಬಿಟ್ಟು
[5]ಭೂಮಿಲಬ್ಬಮಾಗಿಕೊಟ್ಟದೇಗುಲಮುಂಮಾಡಿಸಿಕೆಟ್ಟು ಪಟ್ಟಲಿಂಗಮುಂಪ್ರ
[6]ತಿಷ್ಟೆಗೆಯ್ದು ಮುರುಗಸೆಟ್ಟಿಯುಮುಗಂಬಸವಯ್ಯಂರುದ್ರಹೋಮುಂಗೆಯ್ದು ಸ
[7]ಹಸ್ರಭೋಜನಮಾಡಿಬಲಿಯುಂಕಳೆದುಧರ್ಮ್ಮಂಗ್ಗೆಯ್ದು ಬೆಳತೂರಜವ
[8]ನಿಗಾವುಣ್ಡನಮುಗಂಜಯುಂಗೊಣ್ಡ ಚೋೞಪೆರ್ಮ್ಮಾಡಿಗಾವುಣ್ಡನಲ್ಲಮುರುಗಸೆಟ್ಟಿಯುಮಾ
[9]ಗ್ಗಬ್ಬೆಯುಮುಗಂಸುಪುತ್ರಂಪುಟ್ಟಿದಬಸವಸೆಟ್ಟಿಪದಿನಯ್ದುಗಳನೀರ್ಮ್ಮಣ್ಣು ಅಯ್ದುಗ
[10]ಳಪೂಂಬೊಲನುಂಪೊನ್ನಱಕೊಟ್ಟಮಣ್ಣಱಂಕೊಣ್ಡು ಧಾರಾಪೂರ್ಬಕದಿಂ
[11]ನ್ದಊರುಂಅಯ್ನೂರ್ವ್ವಂಗರೆಮಱಯೊಡದೇಗು

12 ಲಕ್ಕೆ ಬಿಟ್ಟಂಬಸವಸೆಟ್ಟನನ್ನಾದೀವಿಗೆಗೆಕೊಟ್ಟಂ
13 ಇದತ್ತಿಯನೞದವಂಈದೇಗುಲವುಂ
14 ಕವಿಲೆಯುಂವಾರಣಾಸಿಯುಮ
15 ನೞದಪಾತಕಕ್ಕೆ ಸನ್ದಂ ॥

ಹಿಂಭಾಗ.

16 ಬಸವಸೆಟ್ಟನನ್ನಾದೀವಿಗೆಗೆಕೊಟ್ಟಮಣ್ಣಸೀಮಾನ್ತರಂ
17 ನಿಡುಗೆಱೆಯಬಯಲಗೋಳಿಗೞ್ದೆಯಎಱೆಯ
18 ಹಯ್ಯಪುಣುಸೆಯನಡುವೆಪದಿನಯ್ದುಕೊಳಗಬೆದೆ
19 ಗೞ್ದೆಯುಂಮೞ್ತಿಕೆಱೆಯತೆಂಕಣಕಡೆಯಿಂಪಿರಿಯ
20 ಯ್ಯಪುಣುಸೆವರಂನಟ್ಟಬಳಿಗಲ್ಲಿನ್ದಂಪಡುವಣತೆವರಿಂ
21 ದೊಳಗೆಅಯ್ದುಕೊಳಗಬೆದೆಪೊಂಬೊಲಸುಮಿದುಚನ್ದ್ರ
22 ಕ್ಕರ್ತಾರಂಬರಂಸಲ್ವುದುಬಸವಸೆಟ್ಟತನ್ನದೇಹಾರಂಗೆ.
23 ಯ್ವಚೋವವುವಂಧಾರಾಪೂರ್ವ್ವಕಂಭೂಮಿಯುಂಬಿಟ್ಟಂಚೋವವುವಂ
24 ಬರೆಯಿಸಿದಂ ॥ ಸುದತ್ತಂಪರದತ್ತಂವಾಯೋಹರೇತಿವಸುನ್ಧರಾಷಷ್ಟಿ
25 ರ್ವ್ವರಿಷಸಹಶ್ರಾಣಿವಿಷ್ಟಾಯಾಂಜಾಯತೇಕ್ರಿಮಿ । ಮಙ್ಗಳಂ ॥

17

ಅದೇ ಸ್ಥಳದಲ್ಲಿ ಬಿದ್ದಿರುವ ೪ನೇ ಕಲ್ಲು.

ಪೂರ್ವದ ಹಳಗನ್ನಡಕ್ಷರ.—ಪ್ರಮಾಣ 3′ 4″ × 3′ 4″.

1 ಸ್ವಸ್ತಿಶ್ರೀಪೂರ್ವ್ವದೇಸಮುಂ
2 ಗಂಗೆಯುಂಕಡಾರಮುಂಗೊಣ್ಡ ಕೋಪ
3 ರಕೇಸರಿವರ್ಮ್ಮರಾನಶ್ರೀರಾಜೇನ್ದ್ರ
4 ಚೋಳದೇವಗ್ಗ್ರಯಾಣ್ಡು ಇರ್ಪ್ಪತ್ತೆರಡಾ
5 ವುದುಸ್ವಸ್ತಿಸಕನೃಪಕಾಲಾತೀತಸಂವತ್ಸರ
6 ಸತಂಗ ೯೫೫ಯ ಶ್ರೀಮುಖಸಂವತ್ಸರದಮಾರ್ಗ್ಗಶಿ
7 ರಸುದ್ಧಪಾಡಿವಮೂಲಾರ್ಕ್ಕದಂದುಸ್ವಸ್ತಿಸಮಸ್ತಭುವ
8 ನವಿಖ್ಯಾತಪಞ್ಚಶತವೀರಶಾಸನಲಬ್ಧಾನೇಕಗುಣಗ
9 ಣಾಳಂಕ್ರಿತಸತ್ಯಶೌಚಾಚಾರಚಾರುಚಾರಿತ್ರನಯವಿನಯವಿ
10 ಜ್ಞಾನವೀರಬಳಂಜಧರ್ಮ್ಮಗುಡ್ಡಧ್ವಜವಿರಾಜಮಾನಸಾಹಸಾ
11 ನೂನವಿಶಾಳವಕ್ಷಸ್ಥಳಭುವನಪರಾಕ್ರಮಖಣ್ಡಳಿವಾ
12 ಸುದೇವಮೂಳಭದ್ರೋದ್ಭವನ್ನಡಿದುಪುಸಿಮತ್ತೊರ್ದಟ್ಟಕು
13 ಸಿಮುಮ್ಮಹಾಸಮುದ್ರದನ್ತೆಮೇರೆದಪ್ಪಬ್ಬಲದಲ್ಮಹೇಶ್ವರನ
14 ನ್ನರುಪಃಯದಲ್ವಿಷ್ಣುವಿನನ್ನರ್ವ್ವಿಜ್ಞಾನದಲ್ಬ್ರಹ್ಮನನ್ನರ್ಯ್ಯ ಮವರು
15 ಣವಾಯುವ್ಯಚೇರಚೋೞಪಾಣ್ಡ್ಯಲಕ್ಕ್ರಳನ್ನಡೆಗೊಣ್ಡು ಕನ್ನರ ದೇವನಕ
16 ರುಮಾಂ . . . .

(ಮುಂದೆ ಕಲ್ಲು ಒಡೆದು ಹೋಗಿದೆ)

18

ಅದೇ ಗ್ರಾಮಕ್ಕೆ ಪೂರ್ವ ಅಡ್ಡಕಟ್ಟೆ ಹೊಲದಲ್ಲಿ ಬಿನಕಲಮ್ಮನ ಗುಡಿಯ ಬಳಿ ಇರುವ ಕಲ್ಲಿನಲ್ಲಿ.

ಪ್ರಮಾಣ 8′ 6″ × 5′ 6″.

1 ಸ್ವಸ್ತಿಶ್ರೀಚೋಳರಾಜಂಸಕಳವಸುಧೆಯಂಕೊಣ್ಡರಾಜೇನ್ದ್ರದೇವಂದುಸ್ತ್ರರಿವ್ರಾತಘಾತಂನೆಗಳೆಬರಿಸಮಾಱಾಗೆಮತ್ತಂಸ ಕಾಬ್ದಂವಿಸ್ತಾ
2 ರಕ್ಕೊಂಭತೇೞೊಂಭತುಮೆನೆಬರಿಸಂಪೇಮಳಂಬಿಪ್ರಸಿದ್ಧಂಸ್ವಸ್ತಂವಾಸಂಗಡಂಕಾರ್ತಿಕಮಸಿತದಿನಂದ್ವಾದೇಸೋಮವಾ ರಂ । ಕನ್ದ । ಸ್ವಸ್ತಿಶ್ರೀಮ

3 ತುಸಕಳಜಗಸ್ತುತರವಚೋಗ್ರಗಣ್ಯರೂರ್ಜಿತಪುಣ್ಯರ್‌ವಿಸ್ತಾರಚಾರುವೀರರಸಸ್ತತರಿಖವೀವ . ವನುಗುನಾಡಧಿಪರ್ । ಎನಿಪ ಕುಲದಲ್ಲಿಪುಟ್ಟಿದ

4 ನನುಪಮನೆಱೆಯಂಗನವನನಿಜಸುತನೇಚಂಮನುನಿಭನವಂಗೆಪುಟ್ಟಿದತನೂಭವಂಜವನಿಯಮ್ಮನಱಿವಿಂಗಾಮ್ಮ್ರ್ಗಂ। ಅನ್ತಾ ಜವನಯ್ಯಂಗಂ

5 ಕಾನ್ತಾ ಜನತಿಲಕಮೆನಿಪಜಾಕಬ್ಬೆಗಮೊಳ್ಪನ್ತಳೆಯೆಪುಟ್ಟಿದಂರಿಪುಸನ್ತಾನನಗೇನ್ದ್ರವಿಳಯಪವಿಗಂರವಿಗಂ । ರವಿಗಂಪುಟ್ಟಿ ದಬಡನುದ್ಭವ

6 ಮಾಯ್ತುಱಿವಱಿವಿನೊಡನೆಪುಟ್ಟಿದುನಾಯುಂಸವಸನ್ನಾಯದೊಶಂಸಂಭವಮಾದುಮುಚಾಗಮಿನ್ತುಟಂಬಿರೆದುಂಟೆ । ವೃತ್ತ । ಕುಡಿಯುರವಲ್ಲಭಂಕು

7 ಡಿಯರಾಭರಣಂನುಗುನಾಡರಾಮನೆನ್ದಡೆಕಲಿಕಾಲಕರ್ಣ್ನನವಿನೋದದಚಾಗದಬೀರದಾಪ್ಪ್ರನೀಗಡಿನನಿಕೃಷ್ಟನಿಗ್ಗುಣನಿಕೃತ್ಯನಿರಾಚರಣೀಟವೀಟರಂಕಡು

8 ಜಡರನ್ತು ಪೋಲಿಪರೆಧನ್ಯನೆನಿಪ್ಪವಚೋಗ್ರಗನ್ಯನ । ಅಕ್ಕರಂ । ಚೋಳಪಲ್ಲವಪಾಣ್ಡ್ಯಸಿಳಾಮೇಘಕೇರಳಸೊರಟಗಾ . . . ಭೋಜಲಾಳಗಜಪತಿಹಯಪತಿ

9 ನರಪತಿಯೆನಿಪಮಹೀಪಾಳರಾಸ್ಥಾನದಲೆಕೇಳತನ್ನನೆನಟವನ್ದಿಮಾಗಧರ್‌ಕ್ಕೈಕೊಣ್ಡು ಪೊಗೞಲ್ಕೆನೆಗೞ್ದಬಲ್ಲಮೇಳಮಾಣಿಕಮೆ

10 ನಿಪಜಯಂಗೊಣ್ಡಚೋಳಪೆರ್ಮ್ಮಾಡಿಗಾವುಣ್ಡಂತಕ್ಕಂ । ಕನ್ದಂ । ಪಲ್ಲವಸತ್ತಿಗೆಸಂಕಂಝುಲ್ಲರಿಜಯಮಂಗಳಂಗಳಂಚೋಳ ಮಹೀವಲ್ಲಭನಿತ್ತಡೆ

11 ಕುಡಿಯರವಲ್ಲಭನುಱೆಮಣ್ಡಳೀಕಪದಮಂಪಡೆದಂ । ಕಡಲಕಡೆವರಮಜಾಣ್ಡದಕುಡಿವರಮಾಸಾಗಜೇನ್ದ್ರದನ್ತುವರಂತತ್ತ

12 ಡನೊಡನೆಪರ್ವ್ವಿಬಳೆದುದುಕುಡಿಯುರವಲ್ಲಭನಕೀರ್ತಿಲತೆಕೋಮಳದಿ । ಮನುನಿಭನೆಡೆನಾಡಧಿಪತಿವಿನೇಯನಿಧಿಸ

13 ತ್ಯವಾಕ್ಯನಾಲ್ಗೋಜನಮುಖ್ಯನಕುಲವಧುಭೂತಬ್ಬೆಗೆಜನಿಯಿಸಿಕಲಿಕಾಲಸೀತೆವೆಸರಂಪಡೆದಳ್ । ವನಿತಾರನ್ನಂಪೊನ್ನಕ್ಕನ

14 ನೞ್ತಿಯೆಮಮವೆಗೊಣ್ಡು ಬೆಳತೂರಧಿಪಂಮನುನಿಭನೆನೆನೆಗೞ್ದೀತನವನಿತೆಗೆಭೂವನಿತೆಯೊಳಗೆಪೆಱರೆಣೆಯೊಳರೆ । ವೃ

15 ತ್ತ । ನಿರುಪಮಸೀಳದಿಂಗುಣದಿನುತ್ತಮದಾನದಿನಾತ್ಮಭಕ್ತಿಯಿಂಗಿರಿಸುತೆರಂಭೆಮೇನಕೆಸರಸ್ವತಿರುಗ್ಮಿಣಿಸತ್ಯಭಾಮೆಯೊಳ್ ದೊರೆ

16 ಯೆನಲೊಲ್ಲದೀಗಡಿನದುಷ್ಟಕನಿಷ್ಟದುಶ್ಶೀಳದುಗ್ಗುಣಾಧರೆಯರನೆನ್ತುಪೋಲಿಪರೆನಿರ್ಮ್ಮಳಚಿತ್ತದಪೊನ್ನಕಬ್ಬೆಯಂ । ಅಕ್ಕರ । ಚಾರು

17 ಚಾರಿತ್ರೆನಯವಿನಯಾಕರೆಗೋತ್ರಪವಿತ್ರೆಶುಸೀಳಯುಕ್ತೆನಾರೀಜನರನ್ನಮೆನಿಪಪೊನ್ನಬ್ಬೆಗಂರವಿಗಂಗಂಪುಟ್ಟಿದದೇಕಬ್ಬೆಯು

18 ರಂನವಲೆನಾಡಧಿಪತಿಕುಱುವನ್ದಗುಲದಪೆರ್ವ್ವಯಲಾತನೇಚಂಗೀಯೆಮಾರಿಜಾನನೆವಿನಯಚಿನ್ತಾಮಣಿಪತಿಹಿತೆಯೊಡಗೂ

19 ಡಿಸುಖದಿನಿೞ್ದು । ಕನ್ದಂ । ಜೆಟ್ಟಿಗನೆನೆನೆಗರ್ದಹಿತಘರಟ್ಟಂಸುಖಮಿೞ್ದುತನ್ನದಾಯಿಗರಂತಳ್ತೊಟ್ಟಜೆಯಿನಿಱಿದಡಪನಂನೆಟ್ಟ

20 ನೆತಲೆಕಾಡಲುಯ್ದುಕೊನ್ದಂನರಪಂ । ಕಲಿಕಾಲವೇಳನೆನಿಸಿದಕಲಿಚಾಗಿಯನಿಱಿದುಕೊನ್ದಱೆಂಬುದುಮಾತಂಲಲಿತಾಂಗಿಕೇಳ್ದರವಿ

21 ಗನಕುಲದೀಪಕಿಸಾಯಲೆನ್ದುಕೊಣ್ಡುಕೆನಡೆದಳ್ । ತನ್ದೆಯುಮಬ್ಬೆಯುಮೊಡನೆಯೆಬನ್ಧುಗಳುಂಬನ್ದುಮಗಳೆಸಾಯದೆಮಾಣ್ಣೆನೆ

22 ನೆನ್ದೆಲ್ಲಂಕಾಲ್ವಿಡಿದದನಿನ್ದಿತೆದೇಕಬ್ಬೆಮುನಿದುಬಗ್ಗಿಸಿನುಡಿದಳ್ । ನುಗುನಾಡಧಿಪತಿರವಿಗನಮಗಳಾಗಿಯುಮನ್ತೆನವಿಳೆ

23 ನಾಡಧಿಪತಿಗಾಂನೆಗಳೆಸತಿಯಾಗಿಬಾೞ್ವುದಃಬಗೆದಪ್ಪನೆಕೊಟ್ಟುಕೊಣ್ಡಮನೆಯೆಸಮಱಿಯಲ್ । ಎನ್ದುಪರಿಚ್ಛೇದಿಸಿನಯದಿನ್ದಂದೇವಂಗೆ

24 ತೋಂಟಖಣ್ಡದಮಣ್ಣಂನನ್ದಾದೀವಿಗೆಗಿತ್ತರವಿನ್ನಾನನೆಸಲೆನಿವೇದ್ಯಕೆನ್ದನುನಯದಿಂ । ಮಡದಿಸಲೆಗೇೞಗೇೞ್ದೆಯಪಡುವಣಕಡೆಯ

25 ಲ್ಲಿತೆಂಕಲಯ್ಗೊಳಪಳೆಯಂಕಡುಗೂತ್ತಾರ್ಕೊಟ್ಟನುಗುನಾಡೊಡೆಯನಕುಲಪುತ್ರೆಪೆೞ್ದಿಮತ್ತಂಮತ್ತಂ । ವೃತ್ತಂ । ನೆರೆದೆಲ್ಲಂಜೇಡಮಾಣೆನ್ದ

26 ಜೆನುಡಿಯಗಿರಿಂಪೋಗಿಪಾಂಮಾಣೆನೆನ್ದಾದರದಿನ್ದಂಭೂಮಿಪೊಂಪುಟ್ಟಿಗೆಪಸುಧನಮಂನೀಡುತುಂದೇವರದೇವಂಗೞ್ತಿ

27 ಯಿಂಕಯ್ಮುಗಿದುರಿವುರಿಯಂಪೊಕ್ಕುದೇಕಬೆ ತನ್ನಂಧರೆಯುಲ್ಲಂಮೆಚ್ಚಿನಿಚ್ಚಂಪೊಗಳೆನೆಗೞುತುಂದೇವಲೋಕಕ್ಕೆಪೋದಳ್ । ಲಲಿತವೃತ್ತಂ ।

[28]ಶ್ರೀರಮಣೀಗೌರಿಸಚಿಧಾರಿಣಿಯುಪುತ್ರಿರತಿಭೂರಮಣಿಯನ್ನದಸರೂಪವಾಱಿನ್ನೊಳ್ಪ್ಪೊದಾರೆಜಯಧಾರೆಜಸಧಾರೆನಯಧಾ
[29]ರೆಭಯಹಾರೆಪತಿಭಕ್ತಿಧೃತಶಕ್ತಿಯೆನೆಸಂನಿವೀರನಿಧಿಯುಂಚಲದವಾರಿನಿಧಿಯುಂಗುಣದಚಾರುನಿಧಿಯುಂನೆಗರ್ದ್ದದೇಕಲೆಯು
[30]ನಿನ್ತೀನಾರಿಜನರನ್ನ ಮನದಾರೊಮಱೆವರ್ಶಕಳಧಾರಿಣಿಯೊಳಿನ್ತು ವರಕಾನ್ತೆದೊರೆಯಾವಳ್ । ಅಕ್ಕರಂ । ಪಣ್ಡಿತಾಶ್ರ
ಯಂನುಗುನಾ
[31]ಡಾಘವಂಮುನಿವರಸಿಂಗವಾಚಕದಾವಳಂಚಣ್ಡವಿಕ್ರಮಂಕುಡಿಯುರವಲ್ಲಭಂಕಲಿಕಾಲಕರ್ಣ್ಣನ್ ಮಚ್ಛರಿಪವರಗಣ್ಡಂವನ್ದಿ
[32]ಜನಾತ್ತಮ[ಣಿ]ಶಿವಪಾದಶೇಖರಂನಿಜಸುತೆಗನುರಾಗದಿಂಮಣ್ಡಲಕ್ಕೆಲ್ಲಮೞಿಭನ್ದ ಮಾಗೆಲಾಸ್ತಂಭಶಾಸನಮಾಗೆನಟ್ಟಂ ॥
[33]ಶ್ರೀವೇಕಜ್ಜೆಮಹಾದೇವಗೆರ್ಗ್ಗಬಿಟ್ಟಪೂಂಬೊಲಂತೋಂಟಖಣ್ಡಮುಮಂನಿರ್ಮ್ಮಾಣಮಾೞ್ತಿಕೆಱೆಯತೆಂಕಣಕಡೆಯಲ್ಅ
ಯ್ದುಕೊಳಗಗೆಱ್ದೆಯು
[34]ಮಂಕಾವಂಸದ[ಲಿ]ಪುಟ್ಟಿದವರ್ಕಾದರಿಸುಗೆಸಲಿಸದವರ್ನರಕಭಾಜನರಪ್ಪರ್ । ಕನ್ದಂ । ಮಱಪರಚಕ್ರಂದ್ವಿಜರೊಳ್ಕಱೆ
ಮಱೆಯಿ
[35]ಲ್ಲೆನಿಪಕುಱಬನಾದಿತ್ಯಂಸನ್ದಱಿಕೆಯವಗಾದಮಲ್ಲಂಜಱಚದಕವಿರಾಜಬಾನ್ಧವಂಬರೆದನಿದಂ ।
[36]ಕಣ್ಡರಿಸಿದಂಮುನಿವರಸಿಂಗಾಚಾರಿಯುಂಮಚ್ಛರಿಪರಗಣ್ಡಾಚಾರಿಯು

19

ಅದೇ ಹೋಬಳಿ ಚಕ್ಕೂರು ಬಸವೇಶ್ವರ ದೇವಸ್ಥಾನದ ಬಳಿ ಇರುವ ಕಲ್ಲಿನಲ್ಲಿ.

ಪ್ರಮಾಣ 4′ 6″ × 1′ 6″.

[1]ಸ್ವಸ್ತಿಶ್ರೀಶಾಲಿವಾಹನಶಕವ
[2]ರ್ಷಂಗಳು ೧೪೩೯ನೆ ಯಿಶ್ವರನಾಮ
[3]ಸಂವತ್ಸರದಪುಷ್ಯಶುಧ ೧೫ಲುಮಹಿ
[4]ಶೂರಕೃಷ್ಣರಾಜವಡೆಯರವರುವಿದ್ಯಾಂ
[5]ಸವೆಂಕಟಸುಬ್ಬೈಯನವರಿಗೆಚಕ್ಕೂರು
[6]ಗ್ರಾಮ ೧ನೂ ೪ ಗ್ರಾಮುಗಳುಕೆರೆಸಹಾಸಹಿ
[7]ರಂಣ್ಯೋದಕದಾನಧಾರಾಪೂರ್ವಕವಾ
[8]ಗಿಧಾರೆಯರದುಕೊಟ್ಟುಯಿರುವದ
[9]ರಿಂದಾಆಚಂದ್ರಾರ್ಕವಾಗಿಅನುಭ
[10]ವಿಸಿಕೊಂಡುಬರುವದೆಂದುಬರ
[11]ಶಿಕೊಟ್ಟಸರ್ವಮಾಂನ್ಯಶಾಸನ್ನಾ

20

ಅದೇ ಹೋಬಳಿ ಮಂಚೇನಹಳ್ಳಿ ಗ್ರಾಮದ ಮಾರೀಗುಡಿಗೆ ಪಶ್ಚಿಮದಲ್ಲಿ ನೆಟ್ಟ ಕಲ್ಲಿನಲ್ಲಿ.

ಪ್ರಮಾಣ 4′ × 1′ 8″.

[1] . . . .
[2] . . . . .ಶ್ರೀಮ
[3]ನುತಿಪ್ಪರಸ . . . . ಗಳಸಲ
[4] .ಯ
[5]ಬಿಟ್ಟದಂಮಾರ್ಗಗಳ . . . .
[6]ವರಿಗೆದತ್ತಿ . . . .
[7]ಆ . . .ಯನುಅಪ್ಪಣ . . . . .ಲಿಸದವ
[8]ರಿಗೆಗಂಗೆಯುತಡಿಯುಲುಗೋ
[9]ಉಬ್ರಾಂಮಣನಕೊಂದಪಾಪಕ್ಕೆ
[10]ಹೋಹರುಮಾರಣಾಸಿಯುತ
[11]ಡಿಯುಲಿಕಪುಲೆಯುಕೊಂದ
[12]ದೋಸಕ್ಕೆ ಹೋಹದು . . . . . .
[13] . . . ತಿಂಬರುಯೆಂಜಿಮಾನಯುಕಮಾ
[14]ಡಿದಕಾರಿಯು

21

ಅದೇ ಹೋಬಳಿ ಮುಳ್ಳೂರು ಗ್ರಾಮದ ಲಕ್ಷ್ಮೀಕಾಂತ ದೇವಸ್ಥಾನದ ಗರುಡ ಕಂಭದಲ್ಲಿ.

ವುತ್ತರ ಮುಖ.

[1] . . . .

ದಕ್ಷಿಣ ಮುಖ

ಶ್ರೀಪ್ರಸ . . . .

ಪೂರ್ವ ಮುಖ.

. . . .

2 ೪೭೩ ಶಾಲಿಭೂಪನವರ್ಷ ೧೫೪೭ರನೆ
ಯರಕ್ತಾಕ್ಷಿ. . . . .
. . . .ಮಾಬ . ೪ . . . .
3 ರಾದಶ್ರೀರಂಗಪಟ್ಟಣದನಾಳುವಮಯಿಸೂರ
ಚಾಮರಾಜವಡೆ. . . . .
ರಾಮರಾಜೊಡೆ. . . . .
4 ಲಕ್ಷ್ಮೀಕಾಂತದೇವರದೀಪಾಮಾಲೆಕಂಭದವಿವರವೊದಲರ
ಕ. . . . . .ಮೊಳಾರಲಿ
. . . .
5 ಮೊಳೂರುಶೀಮೆಪ್ರಜೆಪರಿವಾರಗಳೆಲ್ಲರುನುಕೂಡಿಕೊಂಡುಕಂ .
ಭ. . . . .
. . . .
6 ಭೋವದೇವಣಯ್ಯನುಸಿಲ್ಪಶಾಸ್ತ್ರ. . . .ಮೂಕ್ಕ. . . .ವಪ್ರಹೇಳಿಮಾಡಿದಸೇವೆ

22

ಅದೇ ಹೋಬಳಿ ಕುಂದೂರು ಮಾರೀಗುಡಿ ಮುಂದೆ ಕಲ್ಲುಕಟ್ಟೆ ಮೇಲೆ ನೆಟ್ಟ ಕಲ್ಲಿನಲ್ಲಿ.

ಗ್ರಂಥ ಮತ್ತು ಅರವಕ್ಷರ.—ಪ್ರಮಾಣ 3′ 8″ × 2′ 2″.

23

ಅದೇ ಗುಡಿಗೆ ವಾಯುವ್ಯ ದಿಕ್ಕಿನಲ್ಲಿರುವ ಕಲ್ಲಿನಲ್ಲಿ.

ಪ್ರಮಾಣ 3′ 6″ × 2′ 2″.

ಮುಂಭಾಗ.

1 ಶ್ರೀನಮಃತುಂಗಸಿರತುಂಗಚಂದ್ರಚಾ
2 ಮರಚಾರವೇತ್ರೈಲೋಕ್ಯಾನಗರಾರಂಭಾಮೂಲ
3 ಸ್ತಂಬಾಯಸಂಬವೇ ॥ ಸ್ವಸ್ತಿಸಮಸ್ತಭುವನಾ
4 ಪ್ರಯಶ್ರೀಪ್ರಿಥ್ವೀವಲ್ಲಬಮಹಾರಾಜದಿರಾಜರಾಜ
5 ಪರಮೇಶ್ವರದ್ವಾರಾವತೀಪುರವರಾಧೀಶ್ವರಯಾದವ
6 ಕುಳಾಂಬರದಿಮಣಿಸಂಮ್ಯಕ್ತಚೂಡಾಮಣಿಮ
7 ಲೆರಾಜರಾಜಮಲೆಪರೊಳುಗಂಡ್ಡಗಂಡ್ಡಭೇ
8 ರುಂಡಕದನಪ್ರಚಂಡನಿಸಂಕಪ್ರತಾಪಚಕ್ರವರ್ತಿ
9 ಶ್ರೀಹೋಸಣವೀರಬಲ್ಲಾಳದೇವರುಂಶ್ರೀಮತುಪಿರಿ
10 ಯರಸಿಮಭಿನವಕೇಥಲ . ಮಹಾದೇವೀರುಸುಕಸಂಕಥಾ
11 ವಿನೋ[ದ]ದಿಂಪ್ರಿತ್ವೀರಾಜ್ಯಂಗೆಯುತ್ತಮಿರೆ ॥ ತತು
12 ಪಾದಪದೂಮೊದಜೀವಿಯಪ್ಪಸ್ವಸ್ತಿಶ್ರೀಮ
13 ನುಮಹಾಪ್ರಧಾನಂಸರ್ವ್ವಾಧಿಕಾರಿಮಹಾಸ
14 ಯಬಹತರನಿಯೋಗಾಧಿಪತಿಯನಾಯ
15 ಕದೇಶಾಧಿಪತಿರಾಉತರಾಯಸರಣಾಗತವಜ್ರ
16 ಪಂಜರರಣರಂಗಸೂದ್ರುಕಂಸಾಹಸಭೀ
17 ಮಂಮಂನೆಯಬೆಂಟೆಕಱಯಶ್ರೀ[ತ]ಜ[ನ]ಕಲ್ಪವ್ರಿಕ್ಷಪರ
18 ನಾರೀಸಹೋದರಂಸತ್ಯರಾಧೇಯಂಪ್ರಧಾನಕರಿಕಳ
19 ಭಯೂತನಾಥಶ್ರೀಯಮ್ರಿತಲಿಂಗಶ್ರೀಕೇದಾರ
20 ದೇವರಶ್ರೀಪಾದಾಧಾರಂಪರಬಳಸಾಧಕರುಮಪ್ಪಕು
21 ಮಾರಮದವದಣ್ಣಾಯಕಂರುಂಕೇಶವದಣ್ಣಾಯ
22 ರುಂಕುಮಾರನಾಡಯೇಕಾದಿಪ್ಪ್ರಿಥವಾಡಿಸುಕ
23 ದಿನಾಳುತ್ತಮಿದ್ದುಶಕವರುಷ ೧೧೪೦ನೆಯ

ಹಿಂಭಾಗ.

24 ಯಿಶ್ವರಸಂವತ್ಸರದಮಾಘದಪಉರ್ಣ್ನಮಿಆದಿ
25 ವಾರಆಶ್ಲೇಶಾನಕ್ಷತ್ರಅಯುಶ್ಮಾಂನುಯೋಗಬವಕ
26 ರಣಸೋಮಗ್ರಹಣದಂದುನುಗುನಾಡಕಲಂ
27 ಬಾಳನಗರದಪ್ರಣ್ಯತಿತ್ತೀರ್ನಾಗ್ನದಿನೇಉತ್ತರಾತೀರದ
28 ಯಿಷ್ಟಕಾಮೇಶ್ವರದೇವರಅಂಗಭೋಗರಂಗಭೋಗಕೆ
29 ನುಗುನಾಡೊಳಗಣಕುಂದೂರನುಶ್ರೀಕುಮಾರಮಾ
30 ದದಣ್ಣಾಯಕರುಂಹದಿನಾಲ್ಕುನಾಡಸಮಸ್ತಪ್ರ
31 ಭು . .ಗಉಡುಗಳುಂಸಬ್ಬಾಬಾಧಪರಿಹ
32 ರವಾಗಿಚಂದ್ರಾರ್ಕ್ಕತಾರಂಬರಂಸಲುಂವಂ
33 ತಾಗಿಧಾರಾಪೂರ್ಬ್ಬಕಂಮಾಡಿಕೊಟ್ಟದು ॥
34 ಯಿ . . . .ನಾನುಅಪಹರಿಸಿಕೊಂಡಯಿ .ದನ
35 ಉರದ . . . . .ಶ್ರೀಮನ್ಮಹಾರಾಜಾ
36 ಧಿರಾಜ. . . . . .ರಾಯ . . . . . .ಪುರೆಯರಶ್ರೀಮ
37 ನ್ಮಹಾಪ್ರಧಾನಸರ್ವ್ವಾಧಿಕಾರಿಬಹತರನಿಯೋಗಾಧಿ
38 ಪತಿ . . . . . .ದೇಶಾಧಿಪತಿರಹುತರಾಯರಣರ
93 ಂಗಸೂದ್ರುಕಂಸಹಸಭೀಮ . . .ನಿಮಿಸರಂಗಡ

40 ಗಂಡ . . . . ಮಂನೆಯಬೇಂಟೆಕಜಟಿ
41 ಶ್ರಿತಜನಕಲ್ಪವಿಕ್ಷಪರನಾರೀಸಹೋದರಸತ್ಯರಾ
42 ಧೇಯಪ್ರಥನಪರಬಲಸಾಧರುಮಪ್ಪನಾರಸಿ
43 ಹ್ವನಾಯಕಂಮಹಪ್ರದನತಿಪ್ಪರಸಯನವರ
44 . ಶ್ರೀಸದ್ಮೋದಯಜೆಯಪ್ಪಎಚಿಮನಾಯಕ
45 ರುಕಲ್ಲಂಬಾಳಕಲಿಯುಗಕಾಮೇಶ್ವರದೇವರಲಿಂಗಭೋ
46 ಗರಂಗಭೋಗಕ್ಕೆನುಗುನಾಡೊಳಗಣಕುಂದೂರನುಮಾಡಿ
47 ನಾಲ್ಕುನಡಸಮಸ್ತಪ್ರಭುಗಾಡುಗಳುಂಸರ್ಬ್ಬಬಾಧೆಪರಿ
48 ಹರವಾಗಿಚಂದ್ರಾರ್ಕ್ಕತಾರಂಬರಂಸಲುವಂತಾಗಿಧಾರಾ
49 ಪೂರ್ವ್ವಕಂಮಾಡಿಕೊಟ್ಟದತ್ತಿ ॥ ಈಧರ್ಮ್ಮವನಾವನು ಅಳಿದ
50 ವವಾರಣಾಸಿಯಲ್ಲಿಕವಿಲೆಯುಂಬ್ರಾಹ್ಮರಕೊಂದಪಾ
51 ಪಕ್ಕೆಹೋಹರು ॥ ಸ್ವದತ್ತಂಪರದತ್ತಂವಾಯೋಹರೇ
52 ತಿವಸುಂಧರಾಸಷ್ಟಿರ್ವರುಶಸಹಸ್ರಾಣಿವಿಷ್ಟಾಯಾಂ
53 ಜಾಯತೇಕ್ರಿಮಿ ॥

24

ಅದೇ ಹೋಬಳಿ ಕಲ್ಲಂಬಾಳು ಕಾಮೇಶ್ವರ ದೇವಸ್ಥಾದ ಮುಂದೆ ೧ನೇ ಕಲ್ಲಿನಲ್ಲಿ.

ಪ್ರಮಾಣ 3′ × 1′ 8″.

1 ಶುಭಮಸ್ತು ವಾಗ್ಗಥಾಯಾಮಸಪತೌವಾಗ್ಗತ್ತಃಪ್ರತಿಪ
2 ದ್ಯತೇಜಗತಃಪಿತರಂವಂದೇಪಾರ್ವತೀಪರಮೇಶ್ವರೌ ॥ ಶಾಲಿವಾ
3 ಹನಶಕಭಃ ೧೬೬೦ ಕಲಿಯಾಬ್ದಃ । ೪೮೩೯ ಸಂದವಾರ್ತಮಾ
4 ನವಾದಕಾಳಯುಕ್ತಿನಾಮಸಂವತ್ಸರನಿಜಆಶ್ವೀಜಶು ೧೫
5 ಸೋಮವಾರದಲೂಸಿಲೆಪುರವೆಂಬಪ್ರತಿನಾಮಧೇಯ
6 ವಾದಕಲಂಬಾಳೆಂಬಗ್ರಾಮ[ದ]ಲ್ಲುಕಾಮೇಶ್ವರಸ್ವಾಮಿ
7 ಯವರದೇವಾಲಯಃಉಸಿತ್ತಿಳವಾಗಿಜೀರ್ಣ್ಣವಾದರಿಂ
8 ದಪುನಹಕಲ್ಲಹಳ್ಳಿಕುಳದಕಂನಪ್ಪಲಿಂಗೇಗಉಡನಮಗಕಪ್ಪಣ
9 ಗಉಡನುಕಪ್ಪನಮಗಸಂಬುಗಉಡನುಸಂಬುಗಉಡನಮಗ
10 ಕಪ್ಪಣಗಉಡನುದೇವಾಲಯಮಂನುಅಷ್ಟಬಂಧನಪುರು
11 ಕವಾಗಿಜೀರ್ನಉಧಾರಮಾಡಿಸ್ತನುಯಿಧರ್ಮವಪರಿಪಾಲಿ
12 ಸಿಕೊಂಡುಯಾವಪುರುಷನಡಸುತಯಿದಾನೆಯೋಆತನಚರಣಾ
13 ರವಿಂದಗಳಂನೂಸಿರಸವೈಸಿನಪೆದುಕೊಂಡುಬರಲುಳ
14 ನುಶ್ರೀಶಾಂಭಸದಾಸಿವಾರ್ಪ್ಯಂನ್ನಮಃ

25

ಅದೇ ದೇವಸ್ಥಾನದ ಮುಂದೆ ನೆಟ್ಟ ೨ನೇ ಕಲ್ಲಿನಲ್ಲಿ.

ಪ್ರಮಾಣ 4′ × 2′ 10″.

1 ನಮಃಸ್ತುಂಗಶಿರಸ್ತುಂಬಿಚಂದ್ರಚಾಮರಚಾರವೇತ್ರೈಳೊಕ್ಯನ ಗರಾ
2 ರಂಭಂಮೂಲಸ್ತಂಭಾಯಶಂಭವೇ ॥ ಸ್ವಸ್ತಿಸಮಸ್ತಭುವನಾ
3 ಶ್ರಯಂಶ್ರೀಪ್ರಿಥ್ವೀವಲ್ಲಭಂಮಹಾರಾಜಾಧಿರಾಜಪರಮೇಶ್ವರಂ
4 ದ್ವಾರಾವತೀಪುರವರಾಧೀಶ್ವರಂಯಾದವಕುಳಾಂಬರದ್ಯುಮಣಿಸ ವ್ಯಕ್ತಚೂಡಾಮಣಿ
5 ಮಲೆರಾಜರಾಜಮಲಪರೊಳುಗಣ್ಡಕದನಪ್ರಚಂಡನಸಹಾಯ
6 ಶೂರಶನಿವಾರಸಿದ್ಧಿಗಿರಿದುರ್ಗಮಲ್ಲಚಳಪಂಕರಾಮನೇಕಾಂಗ
7 ವೀರನಿಶ್ಯಂಕಪ್ರತಾಪಚಕ್ರವರ್ತ್ತಿಹೊಯ್ಸಣಶ್ರೀವೀರಬಲ್ಲಾಳು
8 ದೇವರುಸುಖಸಂಕಥಾವಿನೋದದಿಂಪೃಥ್ವೀರಾಜ್ಯಂಗೆಯ್ಯುತಮಿರೆ
9 ಸಕವರ್ಷ ೧೧೩೩ನೆಯಪ್ರಜಾಪತಿಸಂವತ್ಸರದಭಾದ್ರಪದಬ
10 ಹುಳಶ್ರೀಯೇಕಾದಶಿಆದಿವಾರಪುಸ್ಯನಕ್ಷತ್ರಶಿವಯೋಗಬಾ
11 ಲವಕರಣದಂದುಭಾರದ್ವಾಜಗೋತ್ರದಸ್ವಸ್ತಿಶ್ರೀಮನ್ಮಹಾಪ್ರಧಾ ನಂ
12 ಸರ್ವ್ವಾಧಿಕಾರಿಹಿರಿಯದಣ್ಡನಾಯಕಗೋವಿಂದಮಯ್ಯಂ
13 ಗಳತಮ್ಮಮಂಚಯ್ಯದಣ್ಣಾಯಕರುಂಹದಿನಾಲ್ಕುನಾಡ
14 ಸಮಸ್ತಪ್ರಭುಗಾವುಣ್ಡುಗಳುಂನುಗುನಾಡಶ್ರೀಮಚ
15 ವಂಶದಬಂಕಗವುಡಯಿಂಮಡಿನಾಡಾಳ್ವಪ್ರೌಢಿಗವುಡಕಲ್ಲಂಬಾ
16 ಳಸಮಸ್ತನಖರಂಗಳುಮುಖ್ಯವಾಗಿನುಗುನಾಡೊಳಗಣ
17 ಕುಂದೂರನುಕಲ್ಲಂಬಾಳಕಲಿಯುಗಕಾಮೇಶ್ವರದೇವರನಿತ್ಯ
18 ನಿವೇದ್ಯಶ್ರೀಕಾರ್ಯ್ಯನಡವಂತಾಗಿಧಾರಾಪೂರ್ವ್ವಕಂಮಾಡಿ
19 ಕೊಟ್ಟದತ್ತಿ ॥ ಯಿಧರ್ಮ್ಮವನಾವನಾನುಂಪಳಿಹಿದವನು
20 ವಾರಣಾಸಿಯಲುಕವಿಲೆಯುಂಬ್ರಾಹ್ಮಣರುಮಂಕೊಂ
21 ದಪಾಪದಲುಹೋಹ ॥ ಸ್ವದತ್ತಂಪರದತ್ತಂವಾಯೋಹರೇತಿವ
22 ಸುಂಧರಾಷಷ್ಟಿರ್ವ್ವರ್ಷಸಹಸ್ರಾಣಿವಿಷ್ಠಾಯಾಂಜಾಯ
23 ತೇಕ್ರಿಮಿ ॥ . . . . ದೇವರವಸಯಮುಂದೆಮುರಾರಿನು
24 . . . . ತತಿ . . . . ವತಾರಾ . ಶಾಸ್ತ್ರಾನಹಂಸಹಂತುರಗ
25 . . . . ಮವನಚಮಮುಖಜೆಸ್ವಬಾಜೋ . . .
26 . . . . ಮಿತಿಪ್ರರುಷಂಭೈಕ್ಷಂಗಳಂಪೇಡುಗುಂ

26

ಅದೇ ದೇವಸ್ಥಾನದ ಮುಂದೆ ೩ನೇ ಕಲ್ಲಿನಲ್ಲಿ.

1 ಶುಭಮಸ್ತು ಸ್ವಸ್ತಿ ಶ್ರೀಜಯಾಭ್ಯುದ
2 ಯಕಲಿಯುಗಪ್ರಮಾಣ । ಲ। ೪೩೭೦
3 ೦೦೦ವರುಷಕ್ಕೆ ಸಂದಕಲಿವರುಷ
4 ೪೬೬೦ ಶಾಲಿವಾಹನಶಕವರು . .
5 ೧೪೮೧ ಸಂದಲ್ಲಿಸಿದ್ಧಾರ್ತ್ತಿಸಂವ
6 ತ್ಸರದಚಯಿತ್ರಶು ೧ ಭಾರ್ಗ್ಗವಾ
7 ರನಿತ್ಯನಕ್ಷತ್ರರೇವತೀನಕ್ಷತ್ರ
8 ದಲೂಹುರದಮಾದವನಾ
9 ಯಕರಮಕ್ಕಳುದೊಡ್ಡಮ
10 ಲ್ಲರಾಜಒಡೆಯರಿಗೆಪ್ರಣ್ಯ
11 ವಾಗಲಿಯೆಂದು . . . .

(ಮುಂದೆ ಸವೆದು ಹೋಗಿಧೆ)

27—31

ಆದೇ ದೇವಸ್ಥಾನದ ರಂಗಮಂಟಪದ ಕಂಭಗಳಲ್ಲಿ.

ಗ್ರಂಥ ಮತ್ತು ಅರವಕ್ಷರ.

32

ಅದೇ ದೇವಸ್ಥಾನದ ದಕ್ಷಿಣಕಡೆ ನೆಟ್ಟ ಕಲ್ಲಿನಲ್ಲಿ.

ಪ್ರಮಾಣ 5′ 6″ × 1′ 9″.

1 ನಮಸ್ತುಂಗಶಿರಸ್ತುಂಗಚಂದ್ರಚಾಮರಚಾರ
2 ವೇತ್ರೈಳೋಕ್ಯನಗರಾರಂಭಂಮೂಲಸ್ತಂಭಾಯಶಂಭವೇ ॥
3 ಸ್ವಸ್ತಿ ಸಮಸ್ತ ಭುವನಾಷ್ರಯಂಶ್ರೀಪ್ರಿಥ್ವೀವಲ್ಲಭಮಹಾರಾ
4 ಜಾಧಿರಾಜಪರಮೇಶ್ವರಂದ್ವಾರಾವತೀಪುರವರಾಧೀಶ್ವ
5 ರಂಯಾದವಕುಳಾಂಬರದ್ಯುಮಣಿಸಂವ್ಯಕ್ತಚೂಡಾಮಣಿಮಲೆ
6 ರಾಜರಾಜಮಲೆಪರೊಳುಗಂಡ್ಡಗಣ್ಡಭೇರುಂಡಕದನಪ್ರಚಂಡ
7 ನಿಸಂಕಪ್ರತಾಪಚಕ್ರವರ್ತ್ತಿಶ್ರೀಹೊಸಣವೀರಬಲ್ಲಾಳದೇವರುಂ ಶ್ರೀಮತ'
8 ಪಿರಿಯರಸಿಯಭಿನವಕೇತಲಮಹಾದೇವಿಯರುಂಸುಖಸಂಕಥಾವಿ
9 ನೋದದಿಂಪ್ರಿಥ್ವೀರಾಜ್ಯಂಗೆಯುತ್ತಮಿರೆ ॥ ತತುಪಾದಪದುಮೋಪ
10 ಜೀವಿಯಪ್ಪಸ್ವಸ್ತಿ ಶ್ರೀಮನುಮಹಾಪ್ರಧಾನಂಸರ್ವಾಧಿಕಾರಿ
11 ಮಹಾಪಸಾಯಿತ್ತಂಬಾಹತ್ತರನಿಯೋಗಾಧಿಪತಿಯ
12 ನೆಯಕದೇಶಾಧಿಪತಿರಾವುತ್ತರಾಯಸರಣಾಗತವ
13 ಜ್ರಪಂಜರಂರಣರಂಗಸೂದ್ರಕಂಸಾಹಸಭೀಮಂಮಂ
14 ನೆಯಜೇಂಟಿಕಾಱಂಯಾಶ್ರಿತಜನಕಲ್ಪವ್ರಿಕ್ಷಂಪರನಾರೀಸ
15 ಹೋದರಂಸತ್ಯರಾಧೇಯಂಪ್ರಧಾನಕರಿಕಳಭಯೂಥನಾ
16 ಥಶ್ರೀಯಮ್ರಿತಲಿಂಗಶ್ರೀಕೇದಾರದೇವರಶ್ರೀಪಾದಾರಾ
17 ಧಕಂಪರಬಳಸಾಧಕರುಮಪ್ಪಕುಮಾರಮಾಧವದಂಣ್ನಾ
18 ಯಕರುಂಕೇಶವದಂಣ್ನಾಯಕರುಂಕುಮಾರನಾಡಏಕಾಧಿಷ್ಠಿ
19 ತಮಾಗಿಸುಖದಿನಾಳುತ್ತಮಿದ್ದುಶಕವರ್ಷದ ೧೧೪೦ನೆ
20 ಯಈಶ್ವರಸಂವತ್ಸರದಮಾಘದಪವುರ್ಣ್ನಮಿಆದಿವಾರಆ
21 ಶ್ಲೇಶಾನಕ್ಷತ್ರಆಯುಶ್ಮಾಂಸುಯೋಗಬವಕರಣಸೋಮ
22 ಗ್ರಹಣದಂದುನುಗುನಾಡಕಲ್ಲಂಬಾಳನಗರದಪುಣ್ಯತೀರ್ತ್ಥನುಗು
23 ವಿನವುತ್ತರತೀರದಯಜ್ಞಕಾಮೇಶ್ವರದೇವರಅಂಗಭೋಗರಂಗ ಭೋಗ
24 ಕ್ಕೆನುಗುನಾಡೊಳಗಣಕುಂದೂರನುಶ್ರೀಕುಮಾರಮಾಧವ
25 ದಂಣ್ನಾಯಕರುಂಹದಿನಾಲ್ಕುನಾಡಸಮಸ್ತಪ್ರಭುಗಾಳುಂ
26 ಡುಗಳುಂಸರ್ಬ್ಬಬಾಧಪರಿಹರವಾಗಿಚಂದ್ರಾರ್ಕ್ಕತಾ
27 ರಂಬರಂಸಲುವಂತಾಗಿಧಾರಾಪೂರ್ಬ್ಬಕಂಮಾಡಿಕೊ
28 ಟ್ಟದತ್ತಿ ॥ ಕಲ್ಲಂಬಾಳಮಂಡಲಸ್ವಾಮಿನಖರಂಗಳುಬಿಟ್ಟ
29 ಕೆಯಿಮತ್ತರೊಂದು ॥ ಬಹುಭಿರ್ವ್ವಸುಧಾಭುಕ್ತಾರಾ
30 ಜಭಿಸರರಾದಿಭಿಃಯಸ್ಯಯಸ್ಯಯದಾಭೂಮಿತಸ್ಯ
31 ತಸ್ಯತದಾಫಲಂ ॥ ಸ್ವದತ್ತಂಪರದತ್ತಂವಾಯೋಹರೇ
32 ತಿವಸುಂಧರಾಃಷಷ್ಟಿರ್ವ್ವರ್ಶಸಹಸ್ರಾಣಿವಿಷ್ಠಾ
33 ಯಾಂಜಾಯತೇಕ್ರಿಮಿ ॥

33

ಅದೇ ಹೋಬಳಿ ಚವರ ಗ್ರಾಮದ ಬಸವನ ಗುಡಿಯ ರಂಗಮಂಟಪದ ಬೋದಗೆ ಕಲ್ಲಿನಲ್ಲಿ.

[1]ಸ್ವಸ್ತಿಶ್ರೀವಿಜಯಾಭ್ಯುದಯಶಾಲಿವಾ
[2]ಹನಶಕವರ್ಷಸಾ ೧೬೪೦ಕೆ........
[3]ಕಂಟ......ಸಂವಚರವಾಗಶು....
[4]ವಾರದ..................
[5]ಕ..ತಂದೆತಾಯಿಗಳ. .....
[6]........ಗೆ..ದಕ್ಕಾಯೆಂದುಯಿ
[7]ಕಲ್ಲುಗುಡಿಕಟ್ಟಿದುದಕಂ
* [8]..ಮಂಗಳಮಹಾ ಶ್ರೀ ಶ್ರೀ
[9]...ಮಹಾ ಶ್ರೀ ಶ್ರೀ

34

ಅದೇ ಹೋಬಳಿ ಬೇಚಿರಾಖ್‌ ಬಸವನಕೋಟೆ ಬಸವನಗುಡಿಯ ಮುಂದೆ ಇರುವ ಕಲ್ಲಿನಲ್ಲಿ.

ಪ್ರಮಾಣ 2′ 6″ × 10″.

[1]ಆನಂದಸಂ
[2]ವತ್ಸರದಆಶ್ವ
[3]ಜಬ ೫ಲು..
[4]......ತಿಂಮರಾಜ
[5]ವೊಡೆಯ ....
[6]....ನನವ.........
[7]....ಯುಗ್ರ.........
[6]ಸಮ ....
[9]..........ವಾಗಿಕೊಟ
[10]........ಕ್ರಮವನುಅ
[11]ಳಿಹಿದವವಾರಣಸಿ
[12]ಯಲುಬ್ರಾಮಣನಕೊಂ
[13]ದಪಾಪಕೆಹೋಹರು
[14]ಶ್ರೀ

35

ಅದೇ ಹೋಬಳಿ ಹುಣಸೇಹಳ್ಳಿ ಗ್ರಾಮಕ್ಕೆ ನೈಋತ್ಯ ಮಾಳದಲ್ಲಿನ ಕಲ್ಲಿನಲ್ಲಿ.

ಪ್ರಮಾಣ 1′ 3″ × 3′.

[1]ಸೊಸ್ತಿಶ್ರೀಷಕವರುಷ
[2]೧೪೬೦ನೆಯಪಿಂಗಳ
[3]ಸಂವಕ್ಷರದಆಶ್ವಯಿಜ
[4]ಬ ೫ಲುನರಸಂಣನಯಕರು
[5]ಯಿಱಮನಯಕರುಗಣಚಾ
[6]ರಲಿಂಗಯಿಗೆಸೂತ್ರಗುತ್ತಗೆ
[7]ಗ ಶ್ರಿಂಯಿಹುಣಿಸಹಳ್ಳಿಚ
[8]ತ್ರುಸೀಮೆಬಳಗಾಗಿನಿಧಿ
[9]ನಿಕ್ಷೇಪನಾಲ್ಕುಸಮೆಸುಂ(ಕ)
[10]ಕಯಿಉಬಳಗುಯಿನುಆ
[11]ವರನುಆಳುಪಿದವರುನ
[12]ಕನರಕಕುಂಬಿಯಪತ
[13]ಕೆ....

36

ಅದೇ ಗ್ರಾಮಕ್ಕೆ ಪಶ್ಚಿಮ ಪಟೇಲ್ ಮಲ್ಲೇಗೌಡನ ಹೊಲದಲ್ಲಿರುವ ಕಲ್ಲಿನಲ್ಲಿ.

[1]ಸೊಸ್ತಿಶ್ರೀಸಕಶಕವರುಷ ೧೪೬೦ನೆಯಪಿಂಗಳಸಂವಕ್ಷರ
[2]ದಆಶ್ವಯಿಜಬ ೫ಲುನಾರಸಣ್ಣನಯಾಕರುಯಿಱಮನಯಾಕ
[3]ಹುಣಿಸಹಳಿಯಗಣಚರಿಲಿಂಗಯಿನವರಿಗೆಸುತ್ರಗುತ್ತಗಗ್ರಿಂ
[4]ಯಿಚತ್ರುಸೀಮೆಬಳಗಗಿನಿಧಿನಿಕ್ಷೇಪಸೊನ್ನ್ರದಯನಾಲ್ಕು
ಸಮ
[5]ಯಸುಂಕಯಿಉಬಳಗುಆವದನುತೆಗೆಯೆಂದುಅಳುಪಿ
[6]ದವಗಂಗೆಯತಡಿಯಲ್ಲಿಗೋಉಭ್ರಮ್ಹರಕೊಂದೋಸಕೆ
ಹೋಹ
[7]ಕುಂಬಿಯಪತಕನಯಕನರಕಕಹೋಹರು

* 8, 9ನೆಯ ಪಙ್ತಿಗಳು ಪ್ರಾರಂಭದಲ್ಲಿ ಬರೆಯಲ್ಪಟ್ಟವೆ.

37

ಅದೇ ಹೋಬಳಿ ಬೇಚಿರಾಖ್ ನಲ್ಲೂರು ಗ್ರಾಮದ ವೀರಭದ್ರ ದೇವಸ್ಥಾನಕ್ಕೆ ಪೂರ್ವದಲ್ಲಿ ನೆಟ್ಟ ಕಲ್ಲಿನಲ್ಲಿ.

ಪ್ರಮಾಣ 3′ 6″ × 3′.

1 ಸ್ವಸ್ತಿಶ್ರೀವಿಜಯಾಭ್ಯುದಾಯುಸಾಲಿವಾಹನಸಕವರುಷ
2 ೧೫೫೦ ಸಂದು . . . . ವಾದಖರಸಂವತ್ಸರದ
3 . . . . ರದಲೂಅಚುತದೇವಮಹಾರಾಯರು
4 . . . . . . ಆಸ್ಥಾನದೊಡೆಯಮಾಧವಯ್ಯನವರಕಾರ್ಯ್ಯ
5 ಕೆಕರ್ತ್ತರಾದ . . . . . . ನಾಯಕರುಕೋಟೆಯಸೀಮೆ
6 ಯಹುರದ . . . . ವೊಡೆಯರಿಗೆಸರ್ವ್ವಮಾನ್ಯವಾಗಿಕೊಟ್ಟ
7 ಬಯುನಾಡವಳಗನಲ್ಲೂರಗ್ರಾಮದಚತುಸೀಮೆಯೊಳಗಾ
8 ದಅಕ್ಷೀಣಿಅಗಾಮಿನಿಧಿನಿಕ್ಷೇಪಜಲಪಾಷಾಣಸಿದ್ಧಸಾ
9 ದ್ಯಗಳೆಂಬಅಷ್ಟಭೋಗತೇಜಸಾಂಮ್ಯವಳಗಾಗಿಕೊಟೆವಾಗಿ
10 ನೀವುನಿಮ್ಮಪುತ್ರಪೌತ್ರಪರಂಪರೆಯಾಗಿಆಚಂ
11 ದ್ರಾರ್ಕ್ಕಸ್ತಾಯಿಗಳಾಗಿಸುಕದಲಿಅನುಭವಿಸಿಕೊಂಡುಬಹಿ
12 ರಿಯೆಂದುಕೊಟಶಿಲಾಸಾಶನಸ್ವದತ್ತಂಪರದತ್ತಂವಾ
13 ಯೋಹರೇತಿವಸುಂಧರಾಷಷ್ಟಿರ್ವ್ವರುಷಸಹಸ್ರಾಣಿವಿ

(ಮುಂದೆ ಬರವಣಿಗೆ ಇಲ್ಲ)

38

ಅದೇ ಗ್ರಾಮದ ಸರಹದ್ದಿನ ಸಣ್ಣ ಬಂಡೇ ಮೇಲೆ.

1 ಸಾಗರೇ
2 ಸಂ೯ ೧೪೬೧ನೇಡಿ
3 ಶಂಬರುತಾರೀಕು ೭
4 ಯಿಕಲಿಗೆಪೂರ್ವವೋ
5 ಣಿಪೇಲಿವರಿಗು ೯ ಗಜ
6 ಭುಮಿಸಾಗರೆಗೆಶೇ
7 ರಿದ್ದು ॥
ಉತ್ತರದಲ್ಲಿ.
8 ಶ್ರೀ
9 ಹರಿಹ
10 ರಪುರವಾ
11 ದಸಾಗರೆಗೆ
12 ಸಲುವಸೀಮೆ

39

